ಪ್ರಸ್ತಾವದ ಅಂಗೀಕಾರ

ಶ್ರೀ ಎಂ.ಪಿ. ಪ್ರಕಾಶ್:- ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ಮಾನ್ಯ ಉಪಾಧ್ಯಕ್ಷರೆ, 1997ರ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ,

"1997ರ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತ್ತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(ಆ) ಕರ್ನಾಟಕ ಕರಾರು ವಾಹನಗಳ (ಅರ್ಜನೆ) (ತಿದ್ದುಪಡಿ) ವಿಧೇಯಕ, 1997 ಪರ್ಯಾಲೋಚನಾ ಪ್ರಸ್ತಾವ

ಶ್ರೀ. ಪಿ.ಜಿ.ಆರ್. ಸಿಂಧ್ಯಾ (ಸಾರಿಗೆ ಮಂತ್ರಿಗಳು):- ಈ ಒಂದು ತಿದ್ದುಪಡಿಯನ್ನು ತಂದಿರುವ ಉದ್ದೇಶ, ರಾಜ್ಯದಲ್ಲಿ 1976ರ ಮೋಟಾರ್ ವಾಹನ ಕಾಯಿದೆಗೆ ತಿದ್ದುಪಡಿಯನ್ನು ತಂದ ನಂತರ ವಿದ್ಯಾರ್ಥಿಗಳು ಪ್ರವಾಸಕ್ಕೆ ಹೋಗಬೇಕಾದರೆ ಅಥವಾ ಮದುವೆ ಇತ್ಯಾದಿ ಕಾರ್ಯಕ್ರಮಗಳಿಗೆ ಜನರನ್ನು ಕರೆದುಕೊಂಡು ಹೋಗಬೇಕಾದರೆ ಸಾರಿಗೆ ಸಂಸ್ಥೆ ಎಂದರೆ ಕೆಎಸ್‌ಆರ್‌ಟಿಸಿ ಯವರು ಮಾತ್ರ ಪರ್ಮಿಟ್‌ಗಳನ್ನು ಕೊಡುವುದಕ್ಕೆ ಅವಕಾಶವಿತ್ತೇ ಹೊರತು ಮತ್ತೆ ಯಾರಿಗೂ ಕೂಡ ಅವಕಾಶವಿರಲಿಲ್ಲ. ಈಗ ನಮಗೆ ಗೊತ್ತಿರುವ ಹಾಗೆ ಸಾರಿಗೆ ಸಂಸ್ಥೆಯಲ್ಲಿ ರಾಷ್ಟ್ರೀಕರಣವಾಗಿರುವ ಪ್ರದೇಶದಲ್ಲಿ ಇದರ ತೊಂದರೆಯಾಗುವುದಿಲ್ಲ. ಆದರೆ ರಾಷ್ಟ್ರೀಕರಣವಾಗದೇ ಇರುವ ಪ್ರದೇಶವೇನಿದೆ ಅಲ್ಲಿ ಖಾಸಗಿ ವಾಹನಗಳು ಇವೆ. ಅವರಿಗೆ ಪರ್ಮಿಟ್ ಅನ್ನು, ಮದುವೆಗಳಿಗೆ ಇರಬಹುದು ಅಥವಾ ಎಸ್‌ಕರ್ಶನ್‌ಗೆ ಇರಬಹುದು ಈ ರೀತಿ ತೆಗೆದುಕೊಂಡು ಹೋಗುವುದಕ್ಕೆ ಅವಕಾಶವಿರಲಿಲ್ಲ. ಈ ಅವಕಾಶವನ್ನು ಮಾಡಿಕೊಡ ಬೇಕೆನ್ನುವ ಉದ್ದೇಶದಿಂದಾಗಿ ಈ ತಿದ್ದುಪಡಿಯನ್ನು ನಾವು ತೆಗೆದುಕೊಂಡು ಬಂದಿದ್ದೇವೆ. ಈಗ ಇದರಿಂದ ಏನಾಗುತ್ತಿದೆ ಎಂದರೆ, ಬೇರೆ ರಾಜ್ಯಗಳಲ್ಲಿ ಇದನ್ನು ಕೊಡುತ್ತಿದ್ದಾರೆ. ಉದಾಹರಣೆಗೆ, ಆಂಧ್ರಪ್ರದೇಶ ರಾಜ್ಯದಲ್ಲಿ ಹಾಗೂ ಪಕ್ಕದ ತಮಿಳುನಾಡು ರಾಜ್ಯದಲ್ಲಿ ಇದನ್ನು ಕೊಡುತ್ತಿದ್ದಾರೆ. ನಮ್ಮ ಬಸ್ ಮಾಲಿಕರು ಅಲ್ಲಿಗೆ ಹೋಗಿ ಪರ್ಮಿಟ್‌ಗಳನ್ನು ತೆಗೆದುಕೊಂಡು ಬಂದು ಇಲ್ಲಿ ಆ ಪರ್ಮಿಟ್‌ನಲ್ಲಿ ಹೋಗುತ್ತಾರೆ, ಅದನ್ನು ನಾವು ತಡೆಯುವುದಕ್ಕಾಗುವುದಿಲ್ಲ. ಇದನ್ನು ಮಾಡುವುದರಿಂದಾಗಿ ಸ್ಟೇಟ್ ಎಕ್ಸ್‌ಚೆಕರ್‌ಗೆ ಐದರಿಂದ ಆರು ಕೋಟಿ ರೂಪಾಯಿಗಳ ಹಣ ಬರಬಹುದೆನ್ನುವ ಒಂದು ಅಂದಾಜನ್ನು ಕೂಡ ಮಾಡಿಕೊಂಡಿದ್ದೇವೆ. ಮತ್ತೆ, ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ನಾವು ಈ ಒಂದು ತಿದ್ದುಪಡಿಯನ್ನು

ತಂದಿದ್ದೇವೆ, ಇದು ಇಂಥ ಮಹತ್ವವಾದ ತಿದ್ದುಪಡಿಯೇನಲ್ಲ ದಯಮಾಡಿ ಸದನದ ಎಲ್ಲಾ ಸದಸ್ಯರು, ಎಲ್ಲಾ ಪಕ್ಷದ ನಾಯಕರು ಇದಕ್ಕೆ ಸಮ್ಮತಿಯನ್ನು ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ. ಮಲ್ಲಿಕಾರ್ಜುನ ಖರ್ಗೆ:- ಉಪಾಧ್ಯಕ್ಷರೆ, ಅಂತಹ ದೊಡ್ಡ ತಿದ್ದುಪಡಿಯಲ್ಲದೇ ಇದ್ದರೂ ಕೂಡ ಇದರಲ್ಲಿ ಒಂದು ಅಂಶ ಏನು ಅಡಗಿದೆ ಎಂದರೆ, ಅವರು ಹೇಳಿದ ಹಾಗೆ ಇದು ಕರ್ನಾಟಕ ರಾಜ್ಯದಲ್ಲೇ ನಾವು ನೋಂದಣಿ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟರೆ ಸುಮಾರು ಐದಾರು ಕೋಟಿ ರೂಪಾಯಿಗಳು ಸಿಗುತ್ತದೆನ್ನುವ ಮಾತನ್ನು ಅವರು ಒಪ್ಪಿಕೊಂಡಿದ್ದಾರೆ. ಆದರೆ ಒಂದು ಮಾತು, ಈ ಕರಾರು ವಾಹನಗಳಿಗೆ ಇಲ್ಲೇ ನೋಂದಣಿ ಮಾಡಿ ಅವುಗಳಿಂದ ಶುಲ್ಕವನ್ನು ವಸೂಲ್ಮಾಡತಕ್ಕಂಥದ್ದು ಇದು ಒಂದು ವಿಚಾರ. ಇದರಿಂದ ನಮ್ಮ ಸರ್ಕಾರಕ್ಕೆ ಲಾಭವಾಗುವಾಗ ಈ ತಿದ್ದುಪಡಿಗೆ ನಾವು ವಿರೋಧ ಮಾಡುವುದಿಲ್ಲ. ಆದರೆ ನನ್ನದು ಒಂದು ಸಲಹೆ ಏನೆಂದರೆ, ಈಗ ಅನೇಕ ಕಡೆ ನ್ಯಾಷನಲೈಸೇಷನ್ ರೂಟ್ಸ್ ಏನಿವೆ, ಆ ನ್ಯಾಷ ನಲೈಸೇಷನ್ ರೂಟ್ಸ್‌ಗಳಲ್ಲಿ ಇವತ್ತು ಏನಾಗಿದೆ ಎಂದರೆ, ನಿಮ್ಮ ಕೆಎಸ್‌ಆರ್‌ಟಿಸಿ ಬಸ್‌ಗಳೂ ಕೂಡ ಸರಿಯಾಗಿ ಓಡುವುದಿಲ್ಲ ಮತ್ತೆ ಅಲ್ಲಿ ಖಾಸಗಿ ಬಸ್‌ಗಳು ಕೂಡ ಅಲ್ಲಿ ಬರುವ ಹಾಗಿಲ್ಲ. ಹೀಗಾಗಿ ಅಲ್ಲಿ ತೊಂದರೆ ಏನೆಂದರೆ, ಅಲ್ಲಿ ಮದುವೆ, ಇತ್ಯಾದಿಗಳು ಬಂದರೂ ಕೂಡ ಆಂಧ್ರದಿಂದಲಾದರೂ ಇಲ್ಲವೆಂದರೆ ಬಾಂಬೆಯಿಂದಲಾದರೂ ಬಸ್‌ಗಳನ್ನು ತರಬೇಕೇ ಹೊರತು, ನೀವು ನ್ಯಾಷನಲ್ ರೂಲ್ಸ್ ಮೇಲೆ ಕೆಎಸ್‌ಆರ್‌ಟಿಸಿ ನವರಿಗೂ ಕೂಡ ಕರಾರಿನ ಮೇಲೆ ಕೊಡುವುದಿಲ್ಲ. ಮತ್ತೆ ಅಲ್ಲಿ ಹೊಸ ಬಸ್‌ಗಳನ್ನು ಹಾಕುವುದಕ್ಕೆ ಅನುಮತಿ ಇಲ್ಲ, ಏಕೆಂದರೆ, ಆ ರೂಟ್ಸ್ ನ ಸಂಪೂರ್ಣ ಪ್ರದೇಶ ನ್ಯಾಷನಲೈಸ್ ಆಗಿಲ್ಲ. ಅದಕ್ಕೆ ನನ್ನ ಒಂದು ಸಲಹೆ ಏನೆಂದರೆ, ಅಂಥ ಪ್ರದೇಶಗಳಲ್ಲಿ ನೀವು ಏನು ಮಾಡುತ್ತೀರಿ? ಕೊನೆಯ ಪಕ್ಷ ನಿಮ್ಮ ಕೆಎಸ್‌ಆರ್‌ಟಿಸಿ ಬಸ್‌ಗಳನ್ನಾದರೂ ಹೆಚ್ಚಿನ ಪ್ರಮಾಣದಲ್ಲಿ ಹಾಕಬೇಕು. ಇವತ್ತಿನದಿವಸ ನೀವು ಅನೇಕ ಹಳ್ಳಿಗಳಿಗೆ ಆ ಸೌವಲತ್ತನ್ನು ಕೊಡುವ ಸ್ಥಿತಿಯಲಿಲ್ಲ. ಇವತ್ತು ನಿಮ್ಮ ಡ್ರೈವರ್ಸ್, ಕಂಡಕ್ಟರ್ಸ್ ಯಾವ ರೂಟ್ ಅವರಿಗೆ ಅನುಕೂಲವಿಲ್ಲ ಅಲ್ಲಿಗೆ ಹೋಗುವುದಕ್ಕೆ ತಯಾರಾಗಿಲ್ಲ. ನಮ್ಮ ಹಳ್ಳಿಗಳ ಕಾರ್ನರ್ ಪ್ರದೇಶಕ್ಕೆ ಹೋಗು ಎಂದರೆ ಆ ರೂಟ್‌ಗೆ ಹೋಗುವುದಿಲ್ಲ. ಹೈದರಾಬಾದ್‌ಗೆ ಎಂದರೆ ಹೋಗುತ್ತೇವೆನ್ನುತ್ತಾರೆ, ನಾರಾಯಣಪುರ ಎಂದರೆ ಹೋಗುತ್ತೇವೆನ್ನುತ್ತಾರೆ, ರಾಯಚೂರು ಎಂದರೆ ಹೋಗುತ್ತೇವೆನ್ನುತ್ತಾರೆ, ರಾಯಚೂರಿನಿಂದ ಬೆಂಗಳೂರು ಎಂದರೆ ಹೋಗುತ್ತೇವೆನ್ನುತ್ತಾರೆ ಆ ಆದರೆಯಾವುದಾದರೂ ಯಾದ್ಗಿರ್‌ನಿಂದ ಅಫಜಲ್‌ಪುರಕ್ಕೆ ಹೋಗಿ, ಮತ್ತೆ ಯಾವುದಾದರೂ ಹಳ್ಳಿಗೆ ಹೋಗಿ ಎಂದರೆ ಯಾರೂ ಕೂಡ ಒಪ್ಪುವುದಿಲ್ಲ. ಅದಕ್ಕಾಗಿ ಇದಕ್ಕೆ ಪರ್ಯಾಯ ವ್ಯವಸ್ಥೆಯನ್ನು ಬೇರೆ ಕಡೆಯಾದರೂ ಕಂಡುಹಿಡಿಯಬೇಕಲ್ಲಾ, ಇದಾಯಿತು. ಸಾಮಾನ್ಯವಾಗಿ ಎಲ್ಲಿ ನೀವು ಕರಾರು ವಾಹನಗಳ ಮೇಲೆ ಜನರಲ್ ಪರ್ಮಿಟ್ ಕೊಡಬೇಕು, ಅಂಥ ಕಡೆ ಹೊರಗಡೆ ಬಸ್‌ಗಳು ಬರುತ್ತಿವೆ, ನಮ್ಮದೇ ಆದ ಬಸ್‌ಗಳನ್ನು ಹಾಕಿ ಅಲ್ಲಿ ಅವರಿಂದ ಶುಲ್ಕವನ್ನು ವಸೂಲ್ಮಾಡಿ ಪರ್ಮಿಟ್ ಕೊಡುವ ವ್ಯವಸ್ಥೆ ಮಾಡುವುದಕ್ಕೆ ತಿದ್ದುಪಡಿಯನ್ನು ತಂದಿದ್ದೀರಿ ಇದು ಒಂದು ಐಡಿಯ. ಉಳಿದ ಕಡೆ ಆ ರೀತಿಯ ವ್ಯವಸ್ಥೆಯಾಗಬೇಕಲ್ಲಾ? ಅದಕ್ಕೆ ಯಾವುದಾದರೂ ಒಂದು ಪರಿಹಾರವನ್ನು ಕಂಡುಹಿಡಿಯಬೇಕಾಗುತ್ತದೆ. ಅದರ ಬಗ್ಗೆಯೂ ಕೂಡ ತಾವು ಲಕ್ಷ್ಯ-ವಹಿಸಬೇಕು

ಮತ್ತು ನಾಲ್ಕು ಡಿವಿಷನ್ ಮಾಡುತ್ತೇನೆಂದು, ಹೇಳಿದಿರಿ. ಜಿಲ್ಲೆ ವಿಂಗಡನೆ ಹಾಗೂ ತಾಲ್ಲೂಕು ವಿಂಗಡನೆ ಮಾಡುತ್ತೇನೆ ಎಂದು ನಿಮ್ಮ ಬಸ್‌ಗಳನ್ನು ಸುಟ್ಟುಹಾಕಿ ನಿಮ್ಮ ಸ್ಟೆಂಪ್ಲೀಟ್ ಸೆಟ್ಟಿಂಗ್ಸ್ ಅನ್ನು ಕಡಿಮೆ ಮಾಡಿದರು. ಅಲ್ಲಿ ಸಾವಿರ ಬಸ್ ಇದ್ದಲ್ಲಿ ಅವರ ಹೇಳಿಕೆಯಿಂದ ಒಂದು ಹತ್ತು ಬಸ್‌ಗಳು ಕಡಿಮೆಯಾಗಿದ್ದಾವೆಯೇ ಹೊರತು ಜಾಸ್ತಿ ಏನೂ ಆಗಿಲ್ಲ. ಹಾಗೆಯೇ ನೀವೂ ಕೂಡ ಹೇಳಿಕೊಂಡು ಕೆಎಸ್‌ಆರ್‌ಟಿಸಿಗೆ ಹೆಚ್ಚು ನಷ್ಟ ತರುತ್ತಿದ್ದೀರಿಯೇ ಹೊರತು ಆ ಆಡಳಿತದಲ್ಲಿ ಸುಧಾರಣೆತರುವುದು, ಬೈಫರ್‌ಕೇಟ್ ಮಾಡುತ್ತೇನೆಂದು ಬರಿ ಭಾಷಣ ಮಾಡಿ, ಆ ಕಾರ್ಮಿಕ ಸಂಘಗಳಲ್ಲಿ ನಿಮ್ಮಲ್ಲಿ ಜಗಳ ಹಚ್ಚಿಕೊಂಡು ಅದನ್ನು ಕೇಳುವುದೇ ನಮದಾಗಿದೆಯೇ ಹೊರತು ಆ ಕೆಲಸವೇನೂ ಆಗಿಲ್ಲ. ಯಾವುದೇ ದಕ್ಷತೆಯಾಗಲಿ, ಬೆಳವಣಿಗೆಯಾಗಲಿ ನಾನೇನೂ ಕಂಡಿಲ್ಲ. ಏನು ಹಿಂದೆ ನಷ್ಟವಿತ್ತು ಅದಕ್ಕಿಂತ ಹೆಚ್ಚಿನ ರೀತಿಯಲ್ಲಿ ಇವತ್ತು ನಷ್ಟವಾಗುತ್ತಿದೆಯೇ ಹೊರತು ಅದನ್ನು ನಿಲ್ಲಿಸುವುದಾಗಲಿ, ಕಡಿಮೆ ಮಾಡುವುದಾಗಲಿ ಯಾವುದೇ ರೀತಿಯಲ್ಲಿ ಇವತ್ತಿನವರೆಗೆ ನಡೆದಿಲ್ಲ. ಆದುದರಿಂದ ದಯವಿಟ್ಟು ಕರಾರು ವಾಹನಗಳ ಬಗ್ಗೆ ನ್ಯಾಷನಲೈಸ್ ಆದಂಥ ಪ್ರದೇಶದಲ್ಲಿ ತಾವು ಯಾವ ರೀತಿಯಾದ ಕ್ರಮ ಹಮ್ಮಿಕೊಳ್ಳುತ್ತೀರಿ ಎನ್ನುವುದನ್ನೂ ಕೂಡ ತಿಳಿಸಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳುತ್ತೇನೆ.

ಶ್ರೀ. ವೈ.ರಾಮಕೃಷ್ಣ (ಅನೇಕಲ್):- ಇವತ್ತು ಕರ್ನಾಟಕ ರಾಜ್ಯದಲ್ಲಿ ಯಾವ ರೂಟ್‌ನಲ್ಲಿ ಹೋದರೂ ಕೂಡ ಬಸ್ ಒಳಗೆ ಕುಳಿತುಕೊಳ್ಳುವುದಲ್ಲ, ಬಸ್ ಮೇಲೆ, ಬಸ್ ಒಳಗೆ ಎಷ್ಟು ಜನ ಕುಳಿತುಕೊಳ್ಳುತ್ತಾರೋ ಅದಕ್ಕಿಂತ ಹೆಚ್ಚಿನ ಕೆಪಾಸಿಟಿಯಲ್ಲಿ ಕುಳಿತುಕೊಳ್ಳುತ್ತಾರಲ್ಲಾ, ಇದಕ್ಕೆ ಎಲ್ಲಾದರೂ ರೆಕಗ್ನಿಷನ್ ಕೊಡುತ್ತಾರಾ? ಪ್ರತಿನಿತ್ಯ ಇದೊಂದು ದೃಶ್ಯವಾಗಿಬಿಟ್ಟಿದೆ, ಇದಕ್ಕೆ ಏನು ಮಾಡತ್ತೀರಾ? ಏನಾದರೂ ಕಾನೂನ್ನು ತರುತ್ತೀರಾ? ಇದು ಬಹಳ ಗಂಭೀರವಾಗಿರತಕ್ಕಂಥ ಸಮಸ್ಯೆ, ಇದನ್ನು ನಿಮ್ಮ ಬಗೆಹರಿಸದೇ ಇದ್ದರೆ, ಇನ್ನು ಯಾರ ಕಾಲದಲ್ಲಿ ಬಗೆಹರಿಸುತ್ತೀರಿ? ಮೇಲೆ ಎಲೆಕ್ಟ್ರಿಕ್ ಲೈನ್‌ಗಳು ಹೋಗಿರುತ್ತದೆ ಮೇಲೇ ಕುಳಿತಿರುತ್ತಾರೆ, ಕ್ಲಾಸಿಂಗ್‌ನಲ್ಲಿ ಬಿದ್ದು ಹೋದರೆ ಬಹಳ ಜನ ಇಂಜೂರ್ಡ್ ಆಗುತ್ತಾರೆ ಹಾಗೂ ಎಷ್ಟು ಜೀವಹಾನಿಯಾಗುತ್ತದೆ, ಇದನ್ನು ತಪ್ಪಿಸುವುದಕ್ಕೆ ನೀವು, ಕೆಎಸ್‌ಆರ್‌ಟಿಸಿಗಾದರೂ ಕೊಡಿ, ಬಿಟಿಎಸ್‌ಗಾದರೂ ಕೊಡಿ, ಯಾವುದಕ್ಕಾದರೂ ಕೊಡಿ, ಒಟ್ಟಿನಲ್ಲಿ ನೀವು ಸೌಲಭ್ಯವನ್ನು ಒದಗಿಸಬೇಕಲ್ಲಾ? ನಿಮ್ಮ ಜವಾಬ್ದಾರಿಯೇನು? ಕನ್ನೆಯೆನ್ಸ್ ಒದಗಿಸಿಕೊಡುವುದು, ಅದಕ್ಕೆ ಇದನ್ನು ಎಷ್ಟು ದಿವಸಗಳಲ್ಲಿ ತಪ್ಪಿಸಿ ಪ್ರತಿಯೊಂದು ಕಡೆಗೂ ನೀವು ಬಸ್‌ಗಳನ್ನು ಒದಗಿಸಲು ಸಾಧ್ಯವಾಗುತ್ತದೆನ್ನುವ ವಿಚಾರವನ್ನು ತಾವು ಹೇಳಬೇಕು. ಎರಡನೆಯದಾಗಿ, ಇದಕ್ಕೆ ಸಂಬಂಧಪಡದೇ ಇದ್ದರೂ ಕೂಡ, ನೀವು ನಾಲ್ಕು ಡಿವಿಷನ್ ಏನು ಮಾಡಿದ್ದೀರಿ, I think you have taken that judgment on the experience that you have gained ಅದನ್ನು ಯಾವಾಗ ಅಂತಿಮಗೊಳಿಸುತ್ತೀರಿ? ಅದನ್ನು ದಯವಿಟ್ಟು ನಮಗೆ ಈಗ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ. ವಾಟಾಳ್‌ನಾಗರಾಜ್(ಚಾಮರಾಜನಗರ):- ಮಾನ್ಯ ಉಪಾಧ್ಯಕ್ಷರೆ, ಇವರು ತಂದಿರುವುದಕ್ಕೆ ಒಂದು ಕಡೆ ನಾವು ಸಂತೋಷಪಡಬೇಕಾದ ಉದ್ದೇಶವಿದೆ, ಆದರೆ ಒಂದು ವಿಚಾರವನ್ನು ಅವರು ಗಮನಕ್ಕೆ ತೆಗೆದುಕೊಳ್ಳಬೇಕು, ಪ್ರತಿದಿನ ಒಂದು ಕಡೆ ಸಾರಿಗೆ ಬಸ್‌ಗಳು, ಅದರ ವ್ಯವಸ್ಥೆ, ಮತ್ತೊಂದು ಕಡೆ ಬೆಂಗಳೂರು ನಗರಮೊಂದಲ್ಲೇ ಸುಮಾರು ಒಂದು ದಿವಸಕ್ಕೆ,

ತಮ್ಮ ಅನುಮತಿ ಇಲ್ಲದೆ ತಮ್ಮ ದೃಷ್ಟಿಗೂ ಕಾಣದೆ ಕನಿಷ್ಟ ಒಂದು ಸಾವಾರ ಖಾಸಗಿ ಬಸ್‌ಗಳು ಕಲಾಸಿಪಾಳ್ಯ ಮತ್ತು ಸುಭಾಷನಗರದ ಕೆರೆಯ ಪಕ್ಕ ನಮ್ಮ ಸರ್ಕಾರಿ ಬಸ್‌ಗಳ ಪಕ್ಕದ ಅಂಗಳದ ಜಾಗದಲ್ಲೇ ಐನೂರು ಬಸ್‌ಗಳು ನಿಂತಿರುತ್ತವೆ. ಅವರು ಯಾವ್ಯಾವುದೋ ಪರ್ಮಿಟ್‌ಗಳನ್ನು ತೆಗೆದುಕೊಂಡು ಸರ್ಕಾರಕ್ಕೆ ಬರತಕ್ಕಂಥ ಆದಾಯವನ್ನು ಅವರು ತಾವೇ ಪಡೆದು ಸರ್ಕಾರದ ಸಂಸ್ಥೆಗೆ ತಲುಪತಕ್ಕಂಥ ಹಣವನ್ನು ನಷ್ಟ ಮಾಡಿ ಈ ರೀತಿಯಾದಂತ ಒಂದು ಪರ್ಯಾಯವಾದಂಥ ಸಾರಿಗೆ ವ್ಯವಸ್ಥೆಯನ್ನು ನಡೆಸುತ್ತಿದ್ದಾರೆ. ಈ ಬಗ್ಗೆ ಪ್ರಮಾಣಿಕವಾಗಿ, ಪರಿಣಾಮಕಾರಿಯಾಗಿ, ಇಲ್ಲ ಖಾಸಗಿ ಬಸ್‌ಗಳನ್ನು ಸಂಪೂರ್ಣವಾಗಿ ನಿಲ್ಲಿಸಬೇಕು, ಇಲ್ಲವೇ ಖಾಸಗಿ ಬಸ್‌ಗಳಷ್ಟೇ ಹೊಸ ಬಸ್‌ಗಳನ್ನು ನೀವು ತರಿಸಿ ಪ್ರತಿ ರೂಟ್‌ಗಳಿಗೆ ಕೊಡತಕ್ಕಂಥ ಒಂದು ಪ್ರಮಾಣಿಕ ಚಿಂತನೆಯಾಗಬೇಕಾದ್ದು ತಮ್ಮ ಕರ್ತವ್ಯ ಆದರೆ ಬಗ್ಗೆ ನೀವು ಗಮನ ಕೊಡಲಿಲ್ಲವೆಂದರೆ, ಸಾರಿಗೆ ಸಂಸ್ಥೆಗೆ ನಷ್ಟು ಇದ್ದುದ್ದೇ, ನಷ್ಟ ಯಾವಾಗಲೂ ಬಂದದ್ದೇ ಆದನ್ನು ನೀವು ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ಖಾಸಗಿ ಸಂಸ್ಥೆಯ ಬಸ್‌ಗಳು ಎಷ್ಟು ಓಡುತ್ತವೆ, ಆದೆಷ್ಟೆ ಜಾಸ್ತಿ ಓಡಿದರು ನಿಮಗೆ ನಷ್ಟವಿದೆ. ಇದನ್ನುತಾವು ಗಮನದಲ್ಲಿಡಬೇಕಾಗುತ್ತದೆ. ಮತ್ತೊಂದು ವಿಚಾರವನ್ನು ನಾನು ಪರಿಣಾಮಕಾರಿಯಾಗಿ ಅತ್ಯಂತ ಕಳಕಳಿಯಿಂದ ಮನವಿ ಮಾಡತಕ್ಕಂಥದ್ದು ಏನೆಂದರೆ, ಕಾರ್ಮಿಕ ವರ್ಗಕ್ಕೂ ಮತ್ತು ಸರ್ಕಾರಕ್ಕೂ ಒಂದು ರೀತಿಯಾದಂಥ ಬಹಳ ದೂರವಾದ ಅಂತಹ ನಿರ್ಮಾಣವಾಗಿದೆ, ಭಯಾನಕವಾದ ಪರಿಸ್ಥಿತಿ ನಿರ್ಮಾಣವಾಗಿದೆ. ಆದರೆ ನಾನು ಅತ್ಯಂತ ಕಳಕಳಿಯಿಂದ ಮನವಿ ಮಾಡುವುದೇನೆಂದರೆ, ಕಾರ್ಮಿಕ ವರ್ಗ ಬೇರೆಯಲ್ಲ, ಸರ್ಕಾರ ಬೇರೆಯಲ್ಲ. ಇಲ್ಲ ಪೂರ್ವಾಗ್ರಹಪೀಡಿತವಾಗದೆ ಅಥವಾ ಪ್ರತಿಷ್ಠೆಯನ್ನು ಬದಿಗೊತ್ತಿ ಒಂದು ಕಡೆ ಕುಳಿತು ಚರ್ಚೆಯ ಮೂಲಕ ಅವರ ಸಮಗ್ರ ಬೇಡಿಕೆಗಳನ್ನು ಇಡೇರಿಸತಕ್ಕಂಥದ್ದು ಅತ್ಯಂತ ಪ್ರಮುಖ್ಯವಾಗಿದೆ. ಅವರು ಸಭೆಗಳಲ್ಲಿ ಸಮಾರಂಭಗಳಲ್ಲಿ ಏನೇ ಮಾತನಾಡಿರಬಹುದು, ನೀವು ಸಭೆ, ಸಮಾರಂಭಗಳಲ್ಲಿ ಉತ್ತರವನ್ನು ಕೊಟ್ಟಿರಬಹುದು, ಆದರೆ ನನ್ನ ವೈಯಕ್ತಿಕವಾದ ಕಳಕಳಿಯ ಮನವಿ ಏನೆಂದರೆ, ಈ ಸಾರಿಗೆ ಸಂಸ್ಥೆ ಬಹಳ ಪವಿತ್ರವಾದಂಥ ಸಂಸ್ಥೆ; ಈ ಸಂಸ್ಥೆಯನ್ನು ಬೆಳೆಸಬೇಕಾದ್ದು ಎಲ್ಲರ ಆದ್ಯಕರ್ತವ್ಯ, ಈ ಸಂಸ್ಥೆಯ ಬೆಳವಣಿಗೆಗೆ ಸಾಕಷ್ಟು ಸಹಕರಿಸಿದ್ದೀರಿ, ಮಾಡಿದ್ದೀರಿ ನಾನು ಇಲ್ಲವೆಂದು ಹೇಳುವುದಕ್ಕೆ ಹೋಗುವುದಿಲ್ಲ. ಮತ್ತು ಈ ಸಂಸ್ಥೆಯ ಉನ್ನತಿಗಾಗಿ ಈ ಸದನದ ಒಂದು ಸಮಿತಿಯನ್ನೂ ಕೂಡ ರಚಿಸಿ, ಈ ಸಮಿತಿ ಈಡೀ ದೇಶಾದ್ಯಂತ ಪ್ರವಾಸ ಮಾಡಿ ಈ ಸಂಸ್ಥೆಯ ಉನ್ನತ್ತಿಗಾಗಿ ಎಷ್ಟು ಬೆಳವಣಿಗೆ ಒತ್ತನ್ನು ಕೊಡಬೇಕು, ಅದನ್ನು ಕೊಟ್ಟಿದ್ದೀರಿ, ನಾನೂ ಕೂಡ ಆ ಸಮಿತಿಯ ಒಬ್ಬ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ಆದರೆ ಒಂದು ಮಾತನ್ನು ನಾನು ತಮ್ಮಲ್ಲಿ ಹೇಳುವುದೇನೆಂದರೆ, ಇದನ್ನು ಬಹಳ ಅತ್ಯಂತ ದ್ವೇಷ ಅಸೂಡೆ ಮಟ್ಟಕ್ಕೆ ಈಗ ಹೋಗುತ್ತಿದೆ. ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಬದಲಾಗಿ ಒಂದು ರೀತಿಯ ಗೊಂದಲ ವಾತಾವರಣ ನಿರ್ಮಾಣವಾಗಿದೆ. ಆದುದರಿಂದ ನಾನು ಏನು ಹೇಳುತ್ತೇನೆಂದರೆ ಯಾರ ಮುಖವನ್ನು ಯಾರು ನೋಡದೆ ದೂರ ಸರಿಯುವುದರ ಬದಲು, ತಾವು ಸರ್ಕಾರದಲ್ಲಿದ್ದೀರಿ ಒಂದು ಹೆಜ್ಜೆ ಹಿಂದೆ ಸರಿದು, ಒಂದು ಹೆಜ್ಜೆ ಕೆಳಗೆ ಬಂದು ಕಾರ್ಮಿಕ ಮುಖಂಡವನ್ನು ಕರೆದು ತಾವು ಮಾತನಾಡಿ ಸಮಸ್ಯೆಯನ್ನು ಬಗೆಹರಿಸುವುದು ಅತ್ಯಂತ ಪ್ರಾಮಾಣಿಕವಾದ ಚಿಂತನೆ ಎಂದು ನಾನು ಬಹಳ ಕಳಕಳಿಯಿಂದ ಹೇಳುತ್ತಿದ್ದೇನೆ ನಾನೇನು ಯಾರು ಮೇಲು ಯಾರು ಕೀಳು ಎನ್ನುವ ಮಾತನ್ನು ಹೇಳುತ್ತಿಲ್ಲ. ಆದುದರಿಂದ ತಾವು ಈಗೇನು

ಕೆಎಸ್ಆರ್‌ಟಿಸಿಯನ್ನು ನಾಲ್ಕು ಭಾಗ ಮಾಡಬೇಕೆಂದು ಏನು ಹೊರಟ್ಟಿದ್ದೀರಿ, ಇದನ್ನು ಮತ್ತೊಮ್ಮೆ ತಾವು ನಾಲ್ಕು ಭಾಗ ಮಾಡುವುದು ಸರಿಯೇ ಹೇಗೆ ಎನ್ನುವುದನ್ನು ಚಿಂತನೆ ಮಾಡಿ.

ಶ್ರೀ. ಮಂಜುನಾಥ ಸಿ ಕುನ್ನೂರು:- ನಾಲ್ಕು ಭಾಗ ಮಾಡುವುದರ ಬಗ್ಗೆ ನಿಮ್ಮ ವಿಚಾರವೇನು? ನಾಲ್ಕು ಭಾಗ ಮಾಡುವುದರಿಂದ ದಕ್ಷ ರೀತಿಯಲ್ಲಿ ಆಡಳಿತ ಕೊಟ್ಟಂಥಾಗುತ್ತದೆ.

ಶ್ರೀ. ವಾಟಾಳ್ ನಾಗರಾಜ್:- ನಿಮ್ಮ ವಿಚಾರವೇನು ಎಂದು ಕೇಳಿದರೆ, ನಾಲ್ಕು ಭಾಗ ಮಾಡುವುದು ಬೇಡವೆಂದು ಹೇಳುತ್ತೇನೆ. ನಾನು ನನ್ನ ಅಭಿಪ್ರಾಯವನ್ನು ಹೇಳುತ್ತೇನೆ, ನಾನೇನು ಇದರ ಬಗ್ಗೆ ದ್ವೇಷ ಇಟ್ಟುಕೊಂಡು ಮಾತನಾಡುವುದಕ್ಕೆ ಹೋಗುವುದಿಲ್ಲ. ಈ ಒಂದು ಪರಿಸ್ಥಿತಿಯನ್ನು ತಾವು ಅರ್ಥ ಮಾಡಿಕೊಂಡು, ಪರಿಸ್ಥಿತಿ ಒಂದು ರೀತಿಯಾಗಿ ಸಚಿವರು ಮತ್ತು ಕಾರ್ಮಿಕ ವರ್ಗ ಗಂಡ ಹೆಂಡತಿಯರ ಜಗಳವಿದ್ದಂತೆ ಇರಬಹುದು; ಬಹಳ ದೂರ ಹೊರಟು ಹೋಗಿದೆ. ಇದನ್ನು ಹತ್ತಿರ ತರತಕ್ಕಂಥ ಒಂದು ತಿಳಿ ವಾತಾವರಣ ನಿರ್ಮಾಣವಾಗಬೇಕು, ಇದಕ್ಕೆ ನನ್ನ ಸಹಕಾರವನ್ನು ಎಷ್ಟು ಬೇಕಾದರೂ ಕೊಡುವುದಕ್ಕೆ ನಾನು ಸಿದ್ಧವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಈ ಸಂಸ್ಥೆ ಉಳಿಯುವ ದೃಷ್ಟಿಯಿಂದ, ಕಾರ್ಮಿಕ ವರ್ಗ, ಬೆವರು ಸುದಿಸುವಂಥ ಜನ, ಅವರು ಹಿಂಗು ಮಾತು ಅಥವಾ ಚಳುವಳಿಯನ್ನು ನಡೆಸಿರಬಹುದು, ಧೋರಣೆ ಬದಲಾವಣೆ ಇರಬಹುದು ಅದನ್ನು ತಾವು ಮನಸ್ಸಿನಲ್ಲಿಟ್ಟು ಕೊಳ್ಳದೆ ಪ್ರಾಮಾಣಿಕ ಚಿಂತನೆ ಮಾಡಿ ಆ ಸಂಸ್ಥೆಯನ್ನು ನಾಲ್ಕು ಭಾಗವಾಗಿ ಹೊಡೆಯತಕ್ಕಂಥ ರೀತಿಗೆ ತಾವು ಮತ್ತೊಮ್ಮೆ ಕ್ರಮ ಕೈಗೊಳ್ಳಬೇಕು ಅಥವಾ ಬೆಂಗಳೂರು ಸಾರಿಗೆ ಸಂಸ್ಥೆಯನ್ನು ಖಾಸಗಿಯವರಿಗೆ ಕೊಡುವ ಚಿಂತನೆಯಿದ್ದರೆ ಅದನ್ನು ಮಾತ್ರ ಖಾಸಗಿಯವರಿಗೆ ಕೊಡುಬಾರದೆನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ತಮ್ಮ ಮೂಲಕ ಹೇಳುತ್ತೇನೆ ಸ್ವಾಮಿ.

ಶ್ರೀ. ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ):- ಉಪಾಧ್ಯಕ್ಷರೆ, ಬೆಂಗಳೂರು, ತುಮಕೂರು, ವಿಶೇಷವಾಗಿ ತಮ್ಮ ಭಾಗದಲ್ಲಿ ನೀವು ಹೇಳತಕ್ಕಂಥ ತೊಂದರೆ ಇತ್ತು. ಈ ನಮ್ಮಲ್ಲಿ ಏನಾಗಿತ್ತು ಎಂದರೆ, ಆಂಧ್ರಪ್ರದೇಶಕ್ಕೆ ಹೋಗಿ ಪರ್ಮಿಟ್ ತೆಗೆದುಕೊಂಡು ಬಂದು ವಾಹನಗಳನ್ನು ಓಡಿಸತಕ್ಕಂಥ ಪರಿಸ್ಥಿತಿ ಇತ್ತು, ಇದನ್ನು ಬಹಳ ತಡವಾಗಿಯಾದರೂ ತಂದಿದ್ದೀರಿ, ಅದನ್ನು ನಾವು ಸ್ವಾಗತ ಮಾಡುತ್ತೇವೆ. ಆದರೆ ಒಂದು ಏನಾಗಿದೆ ಎಂದರೆ, ನಿಮ್ಮ ಬಸ್‌ಗಳ ನಾನ್ ಮನೊಪಲಿ ಏರಿಯ ಏನಿವೆ, ಖಾಸಗಿ ಬಸ್‌ಗಳು ಹೆಚ್ಚು ಚಲಿಸತಕ್ಕಂಥ ಏರಿಯ ಏನಿವೆ ಅಲ್ಲಿ ಒಂದೇ ರೂಟ್‌ನಲ್ಲಿ ನಾಲ್ಕು ಐದು ಪರ್ಮಿಟ್‌ಗಳನ್ನು ಒಬ್ಬ ಇಟ್ಟುಕೊಳ್ಳುತ್ತಾನೆ, ಆದರೆ ಚಾಲನೆ ಮಾಡುವುದು ಮಾತ್ರ ಒಂದು ರೂಟ್‌ನಲ್ಲಿ ಅಥವಾ ಎರಡು ರೂಟನಲ್ಲಿ, ಇನ್ನು ಉಳಿದ ಮರ್ನಾಲ್ಕು ರೂಟ್‌ಗಳನ್ನು ಆಪರೇಟ್ ಮಾಡುವುದಕ್ಕೆ ಹೋಗುವುದೇ ಇಲ್ಲ. ಆವಾಗ ಏನಾಗುತ್ತದೆಂದರೆ, ಎಲ್ಲಿ ನೋಡಿದರೂ ಕೂಡ ಬಸ್ ಮೇಲೆ ಕುಳಿತುಕೊಂಡು ಹೋಗುವ ದೃಶ್ಯವನ್ನು ನೋಡಬೇಕಾಗುತ್ತದೆ. ಬಹುಶ: ನಾವು ಎಲ್ಲಾ ಸಂದರ್ಭದಲ್ಲೂ ಕೂಡ ಒತ್ತಾಯ ಮಾಡಿಕೊಂಡು ಬಂದಿದ್ದೇವೆ; ಅದಕ್ಕೆ ಯಾವುದೇ ಕಟ್ಟುನಿಟ್ಟಿನ ಕಾರ್ಯಕ್ರಮವನ್ನು ತಾವು ತರಲಿಲ್ಲ. ಈಗಾಗಲೇ ನೀವು ತುಮಕೂರು ಜಿಲ್ಲೆಗೆ ಬಂದ ಸಂದರ್ಭದಲ್ಲಿ, ಜಿಲ್ಲಾಧಿಕಾರಿಗಳಿಗೆ ಈ ರೀತಿಯಾದ ಎಲ್ಲಾ ಪರ್ಮಿಟ್‌ಗಳನ್ನು ಆಪರೇಟ್ ಮಾಡಬೇಕೆಂದು ಆದೇಶ ಕೊಟ್ಟರೂಕೂಡ ಇದು ವರೆವಿಗೂ ಕೂಡ ಯಾರೂ ಹೊಸ

ರೂಟ್‌ಗಳಲ್ಲಿ ಬಸ್‌ಗಳನ್ನು ಆಪರೇಟ್ ಮಾಡುವ ಗೋಜಿಗೆ ಹೋಗಲಿಕ್ಕೆ ಆಗಲಿಲ್ಲ, ಅದಕ್ಕಾಗಿ ಏನಾದರೂ ಕಟ್ಟುನಿಟ್ಟಿನ ಕ್ರಮವನ್ನು ತರುವುದು ಸೂಕ್ತವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತೊಂದು ವಿಚಾರ ಪ್ರಮುಖವಾದದ್ದು, ಒಬ್ಬ ಜಿಲ್ಲಾಧಿಕಾರಿಗಳಿಗೆ, ಯಾವುದೇ ಒಂದು ರೂಟ್‌ನಲ್ಲಿ ಬಸ್‌ಗಳು ಆಪರೇಟ್ ಆಗುತ್ತಿಲ್ಲವೆಂದಾಗ, ತಾತ್ಕಾಲಿಕವಾಗಿಯಾದರೂ ಪರ್ಮಿಟ್‌ಕೊಡುವುದಕ್ಕೆ ಒಂದು ವಿಶೇಶವಾದ ಅಧಿಕಾರವಿರಬೇಕು. ಆ ರೀತಿ ಕೂಡಲೇ ಪರ್ಮಿಟ್ ಕೊಡುವುದಕ್ಕೆ ಅಧಿಕಾರವಿದ್ದಂಥ ಸಂದರ್ಭದಲ್ಲಿ ಆವಾಗ ಪ್ರವೈಟ್ ಆಪರೇಟರ್ಸ್ ಓಡಿಸಲಿಲ್ಲವೆಂದರೆ ಇನ್ನೊಬ್ಬರಿಗೆ ಪರ್ಮಿಟ್ ಕೊಟ್ಟು ಬಸ್ ಓಡಿಸುವುದಕ್ಕೆ ಅವಕಾಶವಾಗುತ್ತದೆ, ಆವಾಗ ಅವರು ಎಚ್ಚರಗೊಂಡು ಸರಿಯಾಗಿ ಬಸ್‌ಗಳನ್ನು ಓಡಿಸಲು ಸಾಧ್ಯವಾಗುತ್ತದೆ ಎನ್ನುವುದು ಒಂದು ವಿಚಾರ. ಆ ದೃಷ್ಟಿಯಿಂದ ನೀವು ಗಮನ ಹರಿಸಬೇಕು. ಮತ್ತೆ ಈ ಪರ್ಮಿಟ್‌ಗಳನ್ನು ಯಾರಿಗೆ ಕೊಡುತ್ತೀರಿ, ಅದನ್ನು ತಾವು ಉತ್ತರ ಹೇಳುವ ಸಂದರ್ಭದಲ್ಲಿ ಹೇಳಬೇಕು. ನಮ್ಮಲ್ಲಿ ರೆಗ್ಯುಲರ್ ಆಗಿ ಆಪರೇಟ್ ಆಗುವಂಥ ಸ್ಟೇಟ್ ಕ್ಯಾರೇಜ್ ಪರ್ಮಿಟ್ಸ್ ಏನಿರುತ್ತವೆ ಅದಕ್ಕೆನೇ ಈ ತರಕ ಟೂರಿಸ್ಟ್ ಪರ್ಮಿಟ್ ಕೊಡುತ್ತೀರೋ ಅಥವಾ ಬೇರೆಯವರಿಗೆ ಕೊಡತ್ತೀರೊ ಎನ್ನುವುದನ್ನು ತಾವು ಸ್ಪಷ್ಟವಾಗಿ ಹೇಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ. ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ):– ಸನ್ಮಾನ್ಯ ಉಪಾಧ್ಯಕ್ಷರೆ, ಸಾರಿಗೆ ಸಂಸ್ಥೆ ನೊ ಪ್ರಾಫಿಟ್ ನೊ ಲಾಸ್‌ಬೇಸಿಸ್ ಮೇಲೆ ಸೇವಾ ಮನೋಭಾವದಿಂದ ನಡೆಯಬೇಕಾದ್ದು. ಆದರೆ ಇತ್ತೀಚೆಗೆ ಪತ್ರಿಕೆಯನ್ನು ನೋಡಿದಾಗ,ಈ ಕುಟುಂಬ ಯೋಜನೆಯನ್ನು ನಿಲ್ಲಿಸಿದ್ದೀರೆಂದು ಕಾಣುತ್ತದೆ, ಜನರನ್ನು ಸಾಯಿಸುವುದಕ್ಕೆ ಮ್ಯಾಕ್ಸಿಕ್ಯಾಬ್‌ಗಳಿಗೆ ಲೈಸೆನ್ಸ್ ಕೊಟ್ಟು, ಆದರ ಮೇಲೆ ಇಪ್ಪತ್ತು ಹದಿನೈದು ಜನ ಆದರ ಒಳಗಡೆ ಹತ್ತು ಹದಿನೈದು ಜನ ಕುಳಿತ್ತುರುತ್ತಾರೆ, ತಾವು ದಯವಿಟ್ಟು ಗಂಭೀರವಾಗಿ ಪರಿಗಣಿಸಬೇಕು. ಜೊತೆಗೆ ಸಾರಿಗೆ ಸೇವೆ ಕೇವಲ ಪಟ್ಟಣ ಪ್ರದೇಶದಲ್ಲಿ ಮಾತ್ರವಿದೆ; ದಯವಿಟ್ಟು ಅದನ್ನು ಹಳ್ಳಿಗಳ ಪ್ರದೇಶಕ್ಕೆ ವಿಸ್ತರಿಸುವ ಕೆಲಸ ಮಾಡಬೇಕು. ನಾವು ಶಾಸಕರಾಗಿ ಎಲ್ಲಾ ಕಡೆ ಎಲ್ಲಿ ಹೆಚ್ಚು ಬೈಯಿಸಿಕೊಂಡಿದ್ದೇವೆಂದರೆ, ಬಸ್ ಹಾಕದೆ ಇರುವುದರಿಂದ ಹೆಚ್ಚು ಬೈಯಿಸಿಕೊಂಡಿದ್ದೇವೆ. ಮಂತ್ರಿಗಳು ಬೈಯಿಸಿಕೊಂಡಿರಬಹುದು, ನಾವು ಬೈಸಿಕೊಂಡಿದ್ದೇವೆ. ಎಲ್ಲರೂ ಕೇಳುವುದು ಕನಿಷ್ಠ ಸಿಟಿ ಸರ್ವೀಸ್ ರೂಪದಲ್ಲಿ ತಾಲ್ಲೂಕು ಹೆಡ್ ಕ್ವಾರ್ಟ್ರ್‌ಗೆ ಹೋಗತಕ್ಕಂಥ ಒಂದು ಬಸ್ ಹಾಕಿಸುವ ವ್ಯವಸ್ಥೆ ಮಾಡಿದರೆ ಸಾಕಾಗಿದೆ. ಆಂಧ್ರ ಪ್ರದೇಶದಲ್ಲಿ ಯಾವುದೇ ವಿಭಜನೆಯಾಗಿಲ್ಲ, ಹದಿನೈದು ಸಾವಿರ ಬಸ್‌ಗಳು ಓಡುತ್ತಿದ್ದಾವೆ. ತಾವು ದಯವಿಟ್ಟು ವಿಭಜನೆಯ ವಿಷಯದ ಬಗ್ಗೆ ಪುನರ್‌ಪರಿಶೀಲನೆ ಮಾಡಿ ಏಕೆಂದರೆ ಪತ್ರಿಕೆಯನ್ನು ಓದಿದಾಗ ಒಂದು ರೀತಿಯಾಗಿ ಮನಸ್ಸಿಗೆ ವೇದನೆ ಯಾವ ಆಯಿತು, ನೋವೂ ಆಯಿತು, ಏಕೆಂದರೆ, ಇಷ್ಟೊಂದು ದ್ವೇಷ ಅಸೂಯೆ ಸೃಷ್ಟಿಯಾಗುವುದು, ಪ್ರಾಣಭಯದ ವಿಚಾರ ಪತ್ರಿಕೆಯಲ್ಲಿ ಬಂದರೆ ಅದು ಸರಿಯಲ್ಲ. ಕಾರ್ಮಿಕರು ಹಾಗೂ ಸಂಬಂಧಪಟ್ಟ ಮಂತ್ರಿಗಳು ಸೌಹಾರ್ದವಾದ ವಾತಾವರಣದಲ್ಲಿ ಹೋಗಬೇಕಾಗುತ್ತದೆ. ತಾವು ದಯವಿಟ್ಟು ಅದನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ.ಪಿ.ಜಿ.ಆರ್.ಸಿಂದ್ಯಾ(ಸಾರಿಗೆ ಸಚಿವರು):– ಇವತ್ತಿನದಿವಸ ನಮ್ಮ ಸರ್ಕಾರ ಹೊಸ ತಿದ್ದುಪಡಿಯನ್ನು ಏನು ತಂದಿದೆ ಸದನದ ಎಲ್ಲಾ ಪಕ್ಷದ ಗೌರವಾನ್ವಿತ ಸದಸ್ಯರು ಸ್ವಾಗತ ಮಾಡಿದ್ದಾರೆ.

ಶ್ರೀ. ಎಂ.ವೀರಪ್ಪ ಮೊಯ್ಲಿ (ಕಾರ್ಕಳ):- ದೆಹಲಿಯಲ್ಲಿ ಒಂದು ಹೊಸ ವ್ಯವಸ್ಥೆಯನ್ನು ಜಾರಿಗೆ ತಂದಿದ್ದಾರೆ. ಅದೇನೆಂದರೆ, ಬೇರೆ ಬೇರೆ ಎಕ್ಸ್‌ಟೆಷನ್ ಏರಿಯಾದಲ್ಲಿ ಕಛೇರಿಗೆ ಬರುವವರು, ಕಾರ್ಖಾನೆಗಳಿಗೆ ಹೋಗುವವರು ಅಥವಾ ಯಾವುದೇ ಕಾರ್ಯಕ್ರಮಕ್ಕೆ ಬರುವವರು ಅವರೇ ಒಂದು ಬಸ್ ಅನ್ನು ಎಂಗೇಜ್ ಮಾಡಿಕೊಂಡು ವಾಪಸ್ ಹೋಗುವಾಗಲೂ ಕೂಡ ಅದೇ ಬಸ್‌ನಲ್ಲಿ ಎಂಗೆಜ್ ಮಾಡಿಕೊಂಡು ಎಷ್ಟು ಜನಬೇಕೋ ಅಷ್ಟೆ ಜನ ಹೋಗುತ್ತಾರೆ, ಬಹುಶ: ನಿಮ್ಮ ವಿಧೇಯಕದಲ್ಲಿ ಆ ಒಂದು ಪ್ರಾವಿಷನ್ ಇಲ್ಲದೇ ಇದ್ದರೆ ತಾವು ತಿದ್ದುಪಡಿಯನ್ನು ತಂದರೆ ಬಹುಶ: ಈ ಬೇರೆ ಬೇರೆ ಬಡಾವಣೆಯಿಂದ ಕೆಎಸ್‌ಆರ್‌ಟಿಸಿ ಮತ್ತು ಬಿಟಿಎಸ್ ಬಸ್‌ಗಳು ಬಂದು ಹೋಗುವುದರಿಂದ ಉಂಟಾಗುವ ಈ ಕಂಜೆಕ್ಷನ್ ಏನಿದೆ ಇದರಿಂದ ಬಹಳ ತೊಂದರೆಯಾಗುತ್ತಿದೆ. ಬಹುಶ: ಅವರಿಗೆ ಅನುಕೂಲವಾದ ಒಂದು ಬರುತ್ತಾರೆ ಹೋಗುತ್ತಾರೆ, ನಿಮ್ಮ ಬಿಟಿಎಸ್. ಮೇಲೆ ಬೀಳುವ ಬಾರವೂ ಕಡಿಮೆಯಾಗುತ್ತದೆ ಜೊತೆಗೆ ಇವತ್ತೇನು ವಿಪರೀತವಾದ ಆಪಘಾತಗಳನ್ನು ಕಾಣುತ್ತೇವೆ ಇದನ್ನು ಕಡಿಮೆ ಮಾಡುವುದಕ್ಕಾಗುತ್ತದೆ, ಅದಕ್ಕಾಗಿ ಇದನ್ನು ದಯಮಾಡಿ ವಿಚಾರ ಮಾಡಿ.

ಶ್ರೀ ಪಿ.ಜಿ.ಆರ್.ಸಿಂಧ್ಯ(ಸಾರಿಗೆ ಸಚಿವರು):- ಮಾನ್ಯ ಉಪಾಧ್ಯಕ್ಷರೆ, ಸದನದ ಎಲ್ಲಾ ಗೌರವನ್ವಿತ ಸದಸ್ಯರುಗಳೆಲ್ಲರೂ ಕೂಡ ಈ ಒಂದು ತಿದ್ದುಪಡಿ ವಿಧೇಯಕವನ್ನು ಸ್ವಾಗತ ಮಾಡಿರುವುದಕ್ಕೆ ನಾನು ಅವರುಗಳಿಗೆಲ್ಲ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅನೇಕ ಉತ್ತಮವಾದಂತಹ ಸಲಹೆಗಳನ್ನು ಸದನದ ಹಿರಿಯ ಸದಸ್ಯರು, ಮಾನ್ಯ ವಿರೋಧ ಪಕ್ಷದ ನಾಯಕರು, ಮಾಜಿ ಮುಖ್ಯ ಮಂತ್ರಿಗಳು, ವಾಟಾಳ್ ನಾಗರಾಜ್‌ರವರು ಕೊಟ್ಟಿದ್ದಾರೆ ಇದನ್ನೇಲ್ಲ ನಾನು ಕರ ಮಾಡುತ್ತೇನೆ. ಇವರುಗಳು ಕೊಟ್ಟಿರತಕ್ಕಂತಹ ಬಹುತೇಕ ಸಲಹೆಗಳಲ್ಲಿ ಒಂದೆರಡನ್ನು ಬಿಟ್ಟರೆ ಬಾಕಿ ಎಲ್ಲಾ ಸಲಹೆಗಳು ಸಹಿತ ಸಾರಿಗೆ ಸಂಸ್ಥೆ ಆಡಳಿತಕ್ಕೆ ಸಂಬಂಧಪಟ್ಟರತಕ್ಕಂತಹ ವಿಚಾರಗಳು. ಈಗ ತಂದಿರುವ ತಿದ್ದುಪಡಿ ವಿಧೇಯಕಕ್ಕೆ ನೇರವಾಗಿ ಸಂಬಂಧ ಇಲ್ಲ. ಆದುದರಿಂದ ನಾನು ಮನವಿಯನ್ನು ಮಾಡಿಕೊಳ್ಳುವುದೆನೆಂದರೆ ಸದನ ಇನ್ನು ಒಂದು ವಾರಗಳ ಕಾಲ ನಾವುಗಳು ಸೇರುತ್ತಿರುವುದರಿಂದ ಇದರ ಬಗ್ಗೆ ಸಾರಿಗೆ ವಿಚಾರದಲ್ಲಿ ಮತ್ತೊಮ್ಮೆ ಅಧ್ಯಕ್ಷರಲ್ಲಿ ಚರ್ಚೆ ಮಾಡಲಿಕ್ಕೆ ನಾನು ಅವಕಾಶವನ್ನು ಕೊಡಬೇಕೆಂದು ಬೇಡುತ್ತೇನೆ ಅವರು ಒದಗಿಸಿಕೊಟ್ಟರೆ ತಾವುಗಳು ಚರ್ಚೆ ಮಾಡಬಹುದು. ಆದರೆ ಕೆಲವು ವಿಚಾರಗಳನ್ನು ನಾಯಕರು ಮತ್ತು ಸದಸ್ಯರುಗಳು ಈಗ ಎತ್ತಿರುವುದರಿಂದಾಗಿ ಸ್ವಲ್ಪ ಸಮಯದಲ್ಲಿ ಅವುಗಳ ವಿವರಣೆಯನ್ನು ಕೊಡಲಿಕ್ಕೆ ಬಯಸುತ್ತೇನೆ. ಮೊದಲನೇಯದಾಗಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಏನು ಹೇಳಿದ್ದಾರೆಂದರೆ ಹಳ್ಳಿಗಳಿಗೆ ಬಸ್ಸುಗಳು ಹೋಗುವುದಿಲ್ಲ ಎನ್ನತಕ್ಕಂಥದ್ದು ಸತ್ಯ. ಎಲ್ಲಿ ಲಾಂಗ್ ರೂಟ್ಸ್ ಇವೆ, ಎಲ್ಲಿ ರೆಮ್ಯೂನರೇಟೀವ್ ರೂಟ್ಸ್ ಇವೆ, ಆ ರೂಟ್ಸಿನಲ್ಲಿ ಮಾತ್ರ ಹೋಗತಕ್ಕಂಥದ್ದು ಇದು ಮುಂಚಿನಿಂದಂಲೂ ಸಹಿತ ಇದೆ. ತಾವು ಆ ಭಾಗದಿಂದ ಬರತಕ್ಕಂತಹ ಸದಸ್ಯರು ಇದ್ದೀರಿ, ಉಪಾಧ್ಯಕ್ಷರಾಗಿದ್ದೀರಿ ತಮ್ಮಗೆ ಗೊತ್ತಿದೆ. ಆ ಕಡೆಗೆ ಹೋಗತಕ್ಕಂಥದ್ದು ಎಂದು. ಹಳ್ಳಿಗಳಲ್ಲಿರತಕ್ಕಂತಹ ವ್ಯವಸ್ಥೆ ಉತ್ತಮನಾಗಬೇಕು ಎನ್ನತಕ್ಕಂಥದ್ದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಇದರ ಕಡೆ ಸುಧಾರಣೆ ಮಾಡಲಿಕ್ಕೆ ನಾನು ಒಂದು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತಿದ್ದೇನೆ. ಈಗ ತೆಗೆದುಕೊಂಡಿರತಕ್ಕಂತಹ ಸ್ಪೇಷಲ್ ಪರ್ಮಿಟ್ ಏನಿದೆ ಇದು ಕೊಡುತ್ತಾ

ಇರತಕ್ಕಂಥದ್ದು ಇದು ಕೇವಲ ನ್ಯಾಷನಲೈಸ್ಡ್ ಆಗಿಲ್ಲದೇ ಇರುವಂತಹ ಕಡೆಗಳಲ್ಲಿ ಮಾತ್ರವಲ್ಲಿ ಇಡೀ ರಾಜ್ಯಕ್ಕೆ ಅನ್ವಹಿಸುವಂಥದ್ದು ಮತ್ತು ಇದನ್ನು ಕೊಡುತ್ತಾ ಇರತಕ್ಕಂಥದ್ದು ಯಾರು ಸ್ಟೇಟ್ ಕ್ಯಾರೆಜ್ ಪರ್ಮಿಟ್ ಇಟ್ಟುಕೊಂಡಿದ್ದಾರೆ ಅವರಿಗೆ ಮಾತ್ರ ಕೊಡತಕ್ಕಂಥದ್ದು ಎನ್ನುವುದನ್ನು ಸಹಿತ ಸ್ಪಷ್ಟವಾಗಿ ಹೇಳಬಯಸುತ್ತೇನೆ. ಆದರಿಂದ ಇದು ಇಡೀ ರಾಜ್ಯದ ಎಲ್ಲಾ ಜಿಲ್ಲೆಗೂ ಸಹಿತ ಇದು ಉಪಯೋಗವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನಾಲ್ಕು ಡಿವಿಜನನ್ನು ಯಾವಾಗ ಮಾಡುತ್ತೀರಿ ಇದು ತಕ್ಷಣ ಆಗಬೇಕೆಂದು ಹೇಳಿದ್ದಾರೆ ಈಗಾಗಲೇ ಇದರ ಬಗ್ಗೆ ಸಚಿವ ಸಂಪುಟದಲ್ಲಿ ತೀರ್ಮಾನವಾಗಿದೆ. ಬಹುಶ: ಒಂದು ವಾರ ಅಥವಾ 15 ದಿವಸಗಳ ಒಳಗಡೆ ಸಂಬಂಧಪಟ್ಟಂತಹ ಸರ್ಕಾರಿ ಆಜ್ಞೆಯನ್ನು ಹೊರಡಿಸುವುದು ಅಷ್ಟೇ ಅಲ್ಲ ಒಬ್ಬ ಸ್ಪೇಷನ್ ಅಫೀಸರರನ್ನು, ಉನ್ನತ ಮಟ್ಟದ ಅಧಿಕಾರಿಯನ್ನು ಅದಕ್ಕೆ ನೇಮಕ ಮಾಡಿ, ಯಾವ ರೀತಿಯಲ್ಲಿ ಆಸ್ತಿ, ಜವಾಬ್ದಾರಿ, ಸಾಲ ಎಂಪ್ಲಾಂಟೀಸ್ ರೆಲಿಫೇರ್ ಇದನ್ನೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಹೇಳುವುದಕ್ಕೆ ನನಗೆ ಬಹಳ ಸಂತೋಷವಾಗುತ್ತದೆ. ನಿಜವಾಗಿಯೂ ಇದರಲ್ಲಿ ಪ್ರತಿಷ್ಟೆಯ ಪ್ರಶ್ನೆ ಇಲ್ಲ. ಜಗಳದ ಪ್ರಶ್ನೆಯೂ ಸಹಿತ ಇಲ್ಲ ನಾನು ಬಹಳ ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ಮಾನ್ಯ ವೀರಪ್ಪಮೊಯ್ಲಿಯವರು 1993ರಲ್ಲಿ ಮುಖ್ಯಮಂತ್ರಿಯಾಗಿದಂತಹ ಕಾಲದಲ್ಲಿ ಬಸ್ ದರವನ್ನು ಜಾಸ್ತಿ ಮಾಡಿರತಕ್ಕಂತಹ ಸಂದರ್ಭದಲ್ಲಿ ನಾನು ಮಾಡಿರತಕ್ಕಂತಹ ಭಾಷಣವನ್ನು ತಾವು ತೆಗೆದು ನೋಡಬಹುದು. ಬೆಲೆ ಏರಿಕೆಗೆ ನಾವು ವಿರೋಧವನ್ನು ಮಾಡಿರಲಿಲ್ಲ, ಆದರೆ ಒಂದು ಏನು ಹೇಳಿದೇವು ಎಂದರೆ ಕೆಲವು ಸುಧಾರಣೆಗಳು ಆಗಬೇಕು, ಸುಧಾರಣೆಯ ಸಲುವಾಗಿ ನಾನು ಮತ್ತು ಶ್ರೀ ದೇಶಪಾಂಡೆಯವರು ಒಂದು ಸದನ ಸಮಿತಿಯನ್ನು ಮಾಡಿ ಎಂದು ಒತ್ತಾಯವನ್ನು ಮಾಡಿದ್ದೇವು. ಆ ಸಂದರ್ಭದಲ್ಲಿ 16ಜನ. ಬಿ.ಜೆ.ಪಿ.ಯವರು, ವಾಟಾಳ್ ನಾಗರಾಜ್‌ರವರು, ವೈಕೆ. ರಾಮಯ್ಯ ನವರು ಇರತಕ್ಕಂತಹ ಒಂದು ಸದನ ಸಮತಿಯನ್ನು ಮುಖ್ಯಮಂತ್ರಿಗಳ ಸಲಹೆ ಮೇರೆಗೆ ಮಾನ್ಯ ಅಧ್ಯಕ್ಷರು ನೇಮಕವನ್ನು ಮಾಡಿದರು. ನಾವು ಇಡೀ ರಾಷ್ಟ್ರದಲ್ಲಿರತಕ್ಕಂತಹ ಎಲ್ಲಾ ಸ್ಟೇಟ್ ಟ್ರಾನ್ಸ್ಪೋರ್ಟ್ ಅಂಡರ್‌ಟೇಕಿಂಗ್‌ಗಳನ್ನು ನೋಡಿ, ಅಲ್ಲಿ ಕುಳಿತುಕೊಂಡು ಅಧ್ಯಯನವನ್ನು ಮಾಡಿ, ದೇಶದ ಟ್ರಾನ್ಸ್‌ಪೋರ್ಟ್ ಸೆಕ್ಟರ್‌ನಲ್ಲಿರತಕ್ಕಂತಹ ಎಕ್ಸಪರ್ಜಗಳನ್ನು ಇಂಟರ್‌ವ್ಯೂ ಮಾಡಿ, ಪಬ್ಲಿಟ್‌ಗಳನ್ನು ಕರೆದು ಟ್ರೇಡ್ ಯೂನಿಯನ್ ಲೀಡರ್‌ಗಳನ್ನು ಕರೆದು ಯೂನ್ಯಾನಿಯನ್ಸ್ ಆಗಿ 23 ಶಿಫಾರಸ್ಸುಗಳನ್ನು ಮಾಡಿದ್ದೇವೆ. ನಾನು ಕಲ್ಕತ್ತಾದಲ್ಲಿ ಉದ್ದೇಶ ಪೂರ್ವಕವಾಗಿ ಎರಡು ದಿವಸ ಕಾಲ ಹೆಚ್ಚಾಗಿ ಇದ್ದು ಅಲ್ಲಿರತಕ್ಕಂತಹ ಟ್ರಾಫಿಕ್ ಕನ್‌ವೆಶನ್ ಏನು ಯಾವ ರೀತಿಯಲ್ಲಿದೆ ಎನ್ನುವುದನ್ನು ತಿಳಿದುಕೊಳ್ಳುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದೇವೆ. ನಾನು ಪ್ರಾಮಾಣಿಕವಾಗಿ ಹೇಳುವುದಾದರೆ, ಪ್ರತಿಷ್ಟೆಯ ಪ್ರಶ್ನೆ, ನಾನೇನು ದೊಡ್ಡವನು ಆಗಬೇಕು, ಇದರಿಂದ ರಾಜಕೀಯ ಲಾಭವನ್ನು ಪಡೆಯಬೇಕೆಂಬುದು ಎಳ್ಳಷ್ಟು ಸಹಿತ ನನ್ನ ಮನಸ್ಸಿನಲ್ಲಿ ಇಲ್ಲ. ರಾಜ್ಯದಲ್ಲಿ ಸಾರಿಗೆ ವ್ಯವಸ್ಥೆ ಬಹಳ ಹದಗೆಟ್ಟು ಹೋಗಿದೆ. ಅದು ನ್ಯಾಷನಲೈಸ್ಡ್ ಏರಿಯೂ ಇರಬಹುದು, ಬೆಂಗಳೂರು, ಮೈಸೂರು, ಹುಬ್ಬಳ್ಳಿ ಎಂತಹ ನಗರಗಳು ಇರಬಹುದು. It is the worst condition ಇದನ್ನು ಸರಿ ಮಾಡಿಸುವುದಕ್ಕೆ ಟ್ರಾನ್ಸ್ಪೋರ್ಟ್ ಸೆಕ್ಟರ್‌ನಲ್ಲಿ ಇನ್‌ವೆಸ್ಟ್ ಮಾಡತಕ್ಕಂಥದ್ದು ಬಹಳ ಕಡಿಮೆ ಇದೆ. ರೋಡಗಳ ಇಂಪ್ರೂಮೆಂಟ್‌ಗಳ ಬಗ್ಗೆ ನಾನು ಆಮೇಲೆ ಮಾತನಾಡುತ್ತೇನೆ. ಟ್ರಾನ್ಸ್ಪೋರ್ಟ್ ನೆಶ್ಚಾಲಿನಲ್ಲಿ, ಇಸಿವೆಸ್ಟ್‌ಮೆಂಟ ಬಗ್ಗೆ

ಹೇಳುವುದಾದರೆ, ಬಸ್ ಸ್ಟ್ಯಾಂಡ್ ಮಾಡಲಿಕ್ಕೆ ಅಥವಾ ಬಸ್‌ಗಳನ್ನು ನಿಲ್ಲಿಸಲಿಕ್ಕೆ, ಮಾಡತಕ್ಕಂತಹ ಶೆಲ್ಟರಗಳನ್ನು ಮಾಡಲಿಕ್ಕೆ, ಡಿಪೋಗಳನ್ನು ಮಾಡಲಿಕ್ಕೆ ಪ್ರತಿಯೊಂದರಲ್ಲಿ ಯಾವ ಸಹಿತ ನಾವು ಇನ್‌ವೆಸ್ಟ್‌ಮೆಂಟಿ ಮಾಡುತ್ತಾ ಇಲ್ಲ. ಪ್ರೈವೇಟ್‌ನವರಂತೂ ಮಾಡುತ್ತಾರೇ ಇಲ್ಲ. ಹೀಗಾಗಿ ಇವತ್ತು 11,000 ಬಸ್ಸುಗಳು ಸಾರಿಗೆ ಸಂಸ್ಥೆಯ ಆಶ್ರಯದಲ್ಲಿ ಓಡಾಡುತ್ತಿವೆ. It has to standsstill ಸ್ಟೇಟ್ ಕ್ಯಾರೆಜ್ ಬಸ್ಸುಗಳು ಸುಮಾರು 6,000 ಬಸ್ಸುಗಳಿವೆ ಹೀಗೆ ಒಟ್ಟು 17,000 ಬಸ್ಸುಗಳು ನಮ್ಮ ರಾಜ್ಯದಲ್ಲಿದೆ. ಈಗ ನಾವು ಮಾಡಿರತಕ್ಕಂತಹ ಒಂದು ಟ್ರಾಫಿಕ್ ಸರ್ವೆಯ ಪ್ರಕಾರವಾಗಿ ಅಂದಾಜಿನ ಪ್ರಕಾರವಾಗಿ ಇನ್ನು 8,000 ಹೆಚ್ಚುವರಿ ಬಸ್ಸುಗಳು ಅವಶ್ಯಕತೆ ಇದೆ. ಹೀಗಾಗಿರುವುದರಿಂದ ನಾವು ಈಗ ಇರತಕ್ಕಂತಹ ವ್ಯವಸ್ಥೆಯಲ್ಲಿ ಉತ್ತಮವಾದಂತಹ ವ್ಯವಸ್ಥೆಯನ್ನು ಕೊಡುವುದಕ್ಕೆ ಆಗುವುದಿಲ್ಲ. 70,000 ಜನ ಖಾಯಂ ನೌಕರರು ಇದ್ದಾರೆ ಮತ್ತು 10,000 ಜನ ತಾತ್ಕಾಲಿಕ ನೌಕರರು ಇದ್ದಾರೆ, ಆದುದರಿಂದ 80,000 ನೌಕರರನ್ನು ನೋಡಿಕೊಂಡು ಏನು ನಾವು ಬೆಂಗಳೂರಿನಿಂದ ಆಡಳಿತವನ್ನು ಹೇಗೆ ಮಾಡತಕ್ಕಂಥದ್ದು, ಚಂಚಣ ಏನಾಗುತ್ತದೆ, ಇದರಲ್ಲಿ ಏನಾಗುತ್ತದೆ, ಬೆಳಗಾಂನಲ್ಲಿ ಏನಾಗುತ್ತದೆ, ನಿಪ್ಪಾಣಿಯಲ್ಲಿ ಏನಾಗುತ್ತದೆ, ಎನ್ನುವುದು ತಿಳಿಯುವುದಕ್ಕೆ ಬೆಂಗಳೂರಿನಲ್ಲಿ ಆಡಳಿತವನ್ನು ನಡೆಸುವುದಕ್ಕೆ ಕಷ್ಟವಾಗುತ್ತದೆ. ಆದರಿಂದಾಗಿ ಬೇರೆ ರಾಜ್ಯ ಈ ಪದ್ಧತಿಯೇ ಇದೆಯಲ್ಲಾ ಆ ರೀತಿಯಾಗಿ ಹೇಗೆ ನಡೆದುಕೊಳ್ಳುತ್ತಿಲ್ಲ, ಸಾರಿಗೆ ಸಚಿವನಾದಮೇಲೂ ಸಹಿತ ನಾನು ಮತ್ತು ಮಾನ್ಯ ಉಪ ಮುಖ್ಯ ಮಂತ್ರಿಗಳು ಗುಜರಾತ್‌ಗೆ ಹೋಗಿ, ಆಂಧ್ರಪ್ರದೇಶಕ್ಕೆ ಹೋಗಿ ಅಲ್ಲಿ ಇರತಕ್ಕಂತಹ ವ್ಯವಸ್ಥೆಯನ್ನು ನೋಡಿಕೊಂಡು ಬಂದಿದ್ದೇವೆ. ನಾನು ಅವುಗಳನ್ನು ಹೊಲಿಕೆ ಮಾಡಿಕೊಳ್ಳುವುದಕ್ಕೆ ಬಯಸುವುದಿಲ್ಲ. ಆದರ ಬಗ್ಗೆ ಹೇಳಲಿಕ್ಕೂ ಕೂಡ ಬಯಸುವುದಿಲ್ಲ. ಸಾರಿಗೆ ವ್ಯವಸ್ಥೆಯನ್ನು ಉತ್ತಮಪಡಿಸುವ ಸಲುವಾಗಿಯೇ ನಾವು ನಾಲ್ಕು ವಿಭಾಗವನ್ನಾಗಿ ಮಾಡಬೇಕಾದಂತಹ ಅನಿವಾರ್ಯ ಇದೆ. ಇಲ್ಲದೇ ಇದ್ದರೆ ಅದನ್ನು ಉತ್ತಮಪಡಿಸುವುದಕ್ಕೆ ಸಾಧ್ಯವೇ ಇಲ್ಲ. ಆ ವಿಚಾರದಲ್ಲಿ ಮಾನ್ಯ ಸದಸ್ಯರುಗಳು ಸಹಕಾರವನ್ನು ಕೊಡಬೇಕು ಎನ್ನುವುದನ್ನು ನಾನು ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಇನ್ನು ಮಾನ್ಯ ರಾಮಕೃಷ್ಣನವರು ಹೇಳಿರತಕ್ಕಂತಹ ಸಲಹೆಯನ್ನು ನಾನು ತೆಗೆದುಕೊಂಡಿದ್ದೇನೆ. ಟಾಪ್ ಟ್ರಾವಲಿಂಗ್ ಏನಿದೆ ಇದು ಕೆ.ಎಸ್.ಆರ್.ಟಿ.ಸಿ.ಯಲ್ಲಿಯೂ ಮತ್ತು ಖಾಸಗಿ ಸೆಕ್ಟಾರ್‌ನಲ್ಲಿಯೂ ಇದೆ ಅದನ್ನು ನಿಲ್ಲಿಸಬೇಕು. ಟಾಪ್ ಟ್ರಾವಲಿಂಗ್‌ನ್ನು ನಿಲ್ಲಿಸಬೇಕಾದರೆ ಹೆಚ್ಚಿಗೆ ಬಸ್ಸುಗಳನ್ನು ಹಾಕಬೇಕು. ಹೆಚ್ಚಿಗೆ ಬಸ್ಸುಗಳನ್ನು ಹಾಕಬೇಕಾದರೆ ಹೆಚ್ಚಿಗೆ ಡಿಪೋಗಳನ್ನು ಮಾಡಬೇಕು ಜೊತೆಗೆ ಮೂಲ ಭೂತವಾದಂತಹ ಸೌಲಭ್ಯಗಳನ್ನು ಮಾಡಬೇಕು. ಈ ವರ್ಷ ನಾವು 2,000 ಹೊಸ ಬಸ್ಸುಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಪ್ರತಿದಿವಸ ನಾಲ್ಕು ಬಸ್ಸುಗಳನ್ನು ಕೆ.ಎಸ್.ಆರ್.ಟಿ.ಸಿ.ಗೆ ಸೇರಿಸುತ್ತಿದ್ದೇವೆ. ಏಪ್ರಿಲ್‌ನಿಂದ ಒಂದು ದಿನಕ್ಕೆ 8 ಬಸ್ಸುಗಳನ್ನು ಸೇರಿಸುತ್ತೇವೆ. ಆದರೂ ಸಹಿತ ನಮ್ಮ ಕೈಯಲ್ಲಿ ಇದನ್ನು ಮಾಡಲಿಕ್ಕೆ ಆಗುತ್ತಿಲ್ಲ. ಆ ಅಮೆಂಡ್‌ಮೆಂಟನ್ನು ತರಲಿಕ್ಕೆ ಮುಖ್ಯವಾದಂತಹ ಉದ್ದೇಶ ಏನೆಂದರೆ, ಯಾರಾದರೂ, ಅನೇಕ ಶಾಸಕರುಗಳು, ಶಿಕ್ಷಣ ಸಂಸ್ಥೆಯವರು, ನಮ್ಮ ಶಾಲೆಯವರು ಮಕ್ಕಳು ಟ್ರಿಪ್ ಹೋಗಬೇಕಾಗಿದೆ ಒಂದು ಬಸ್ಸು ಕೊಡಿಸಿ ಎಂದು ಒಬ್ಬ ಮಂತ್ರಿಗೆ ಬಂದು ಕೇಳುತ್ತಾರೆ. ಆಗ ನಾನು ಒಬ್ಬ ಡಿಪೋ ಮ್ಯಾನೇಜರ್‌ಗೆ ಅಥವಾ ಡಿವಿಜನಲ್ ಕಂಟ್ರೋಲ್‌ರೆಗೆ ನಮ್ಮ ಡಿ.ಸಿ.ಎಂ.ಡಿ.ಯವರ ಮುಖಾಂತರ ಹೇಳಿಸುತ್ತೇನೆ. ಆಗ ಅವರು ಏನು ಮಾಡುತ್ತಾರೆ

ಅವರು ತಕ್ಷಣ ರೂಟ್‌ನಲ್ಲಿರತಕ್ಕಂತ ಬಸ್ಸನ್ನು ತೆಗೆದು ಬಿಟ್ಟು ಅವರಿಗೆ ಟ್ರಿಪ್ ಹೋಗುವುದಕ್ಕೆ ಬಸ್ಸು ಕೊಡುತ್ತಾರೆ. ಹೀಗಾಗಿ 30ಪರ್ಸೆಂಟ್ ಕ್ಯಾಷಲೇಷನ್ ಮತ್ತೆ ಮಾನ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಹೇಳಿರತಕ್ಕಂಥದ್ದು 100ಕ್ಕೆ 100ರಷ್ಟು ಸತ್ಯವಾಗಿರತಕ್ಕಂತಹ ವಿಚಾರ. ಯಾವ ರೂಟ್ಸ್‌ಗಳಿಗೆ ಹೋಗಬೇಕೋ ಅಲ್ಲಿಗೆ ಹೋಗುವುದಿಲ್ಲ. ಆ ರೂಟ್ಸ್‌ಗೆ ಹೋಗಿ ಎಂದು ಫೋರ್ಸ್ ಮಾಡುವುದಕ್ಕೆ ಹೋದರೆ ಅಬ್ಜೆಂಟಿಸಂ. ಸರ್ಕಾರದ ಯಾವುದಾದರೂ ಸಂಸ್ಥೆಯಲ್ಲಿಯಾದರೂ 100ಕ್ಕೆ 25ರಷ್ಟು ಜನ ಯಾವುದೇ ಕಾರಣವನ್ನು ಕೊಡದೇ ಅಬ್ಜೆಂಟ್ ಇಲ್ಲದೇ ಇರತಕ್ಕಂತಹ ಉದಾಹರಣೆಯನ್ನು ಕೊಡಿ. ನನ್ನ ಮೇಲೆ ವೈಯಕ್ತಿಕವಾಗಿ ಆಪಾದನೆಯನ್ನು ಮಾಡಿದ್ದಾರೆ. ಅದರ ಬಗ್ಗೆ ಪ್ರಸ್ತಾಪವನ್ನು ಮಾಡುವುದಕ್ಕೆ ಹೋಗುವುದಿಲ್ಲ. ಯಾರಾದರೂ ಗೌರವ ಇರತಕ್ಕಂಥವರು ಆದರೆ ಒಂದು ತಕ್ಷಣವೂ ಸಹಿತ ಸಾರ್ವಜನಿಕರ ಎದುರಿಗೆ ಇರಬಾರದು ಅಂತಹ ಅಪಾದನೆಯನ್ನು ಮಾಡಿದ್ದಾರೆ. ಇದು ಎಲ್ಲರ ಜೀವನದಲ್ಲಿ ಬರುತ್ತದೆ ನನಗೆ ಗೊತ್ತಿದೆ. ನಮ್ಮ ಶ್ರೀ ವಾಟಾಳ್ ನಾಗರಾಜ್‌ರವರೂ ಸಹಿತ ಇದನ್ನು ಸ್ವಲ್ಪ ದೀರ್ಘವಾಗಿ ನೋಡಿದರೆ ಬಹುಶಃ ಅವರು ಒಪ್ಪುವುದಿಲ್ಲವೆಂದು ನಾನು ಅಂದುಕೊಂಡಿದ್ದೇನೆ. ಎರಡನೆಯದಾಗಿ ಸಾರಿಗೆ ಸಂಸ್ಥೆ ಕಾರ್ಮಿಕರುಗಳ ಬಗ್ಗೆ ಎಲ್ಲಿಯೂ ಕೂಡ ದೋಷರೋಪನೆಗಳನ್ನು ನಾವು ಮಾಡಿಲ್ಲ. ನಾನು ಸ್ಪಷ್ಟವಾಗಿ ಹೇಳುವುದಾದರೆ ಸಾರಿಗೆ ಸಂಸ್ಥೆಯಲ್ಲಿರುವ 100ಕ್ಕೆ 95ಕ್ಕೂ ಹೆಚ್ಚು ನೌಕರರುಗಳು ಬಹಳ ಒಳ್ಳೆಯವರು. ಇದನ್ನು ನಾನು ಎಲ್ಲಾ ಕಡೆಗಳಲ್ಲಿಯೂ ಕೂಡ ಹೇಳಿದ್ದೇನೆ. ಆದರೆ ಕೆಲವು ಮುಖಂಡರುಗಳು ನಾನು ಅವರಿಗೆ ದುರುದ್ದೇಶ ಇದೆ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಅವರನ್ನು ತಪ್ಪು ದಾರಿಗೆ ಎಳೆಯುವುದಕ್ಕೆ ಪ್ರಯತ್ನವನ್ನು ಮಾಡುತ್ತಿದ್ದಾರೆ. ಅದನ್ನೂ ಕೂಡ ನಾವು ಪ್ರತಿಷ್ಠೆಯನ್ನಾಗಿ ಮಾಡಿಕೊಂಡಿಲ್ಲ. ಇವೊತ್ತು ಯಾರಾದರೂ ಶಾಸಕರು ನನ್ನ ಜೊತೆಯಲ್ಲಿ ಬಂದರೆ ತೋರಿಸುತ್ತೇನೆ. The Depots are not managad by the Managers or Management, but by the conductors and drivers. ಅವರು ಹೇಳಿದ ಕಡೆಗೆ ನಾವು ರೂಟ್ಸ್ ಕೊಡಬೇಕು, ಅವರು ಹೇಳಿದ ಊರಿನ ಕಡೆ ಕೊಡಬೇಕು ಅವರು ತೆಗೆದುಕೊಂಡು ಬಂದಿದೆ ಕೆಲೆಕ್ಷನ್. ನಾವು ತಪ್ಪಗೆ ಇರಬೇಕಾಗುತ್ತದೆ. ನಾವು ಲಕ್ಷನ ತೆಗೆದುಕೊಳ್ಳುತ್ತವೆಂದರೆ, ನೀವು ಲಕ್ಷನ ತೆಗೆದುಕೊಳ್ಳಬೇಡಿ ಎಂದು ಹೇಳುತ್ತಾರೆ. ದಯವಿಟ್ಟು ಹೇಗೆ ನಡೆಸುವುದು ಎಂಬುದನ್ನು ನೀವೇ ಹೇಳಿ. ಆದರಿಂದ ನಾವು ಶಿಸ್ತಿನ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಮತ್ತೆ ಸೌಹಾರ್ದಾಯಿತವಾದಂತಹ ವಾತಾವರಣ ನಿರ್ಮಾಣವಾಗಬೇಕು. ಈ ಸರ್ಕಾರಕ್ಕೆ, ಈ ಸದನಕ್ಕೆ ಸಭಾನಾಯಕರು ಮಾನ್ಯ ಮುಖ್ಯಮಂತ್ರಿಗಳು. ಉಪಮುಖ್ಯಮಂತ್ರಿಗಳು, ಮಾಜಿ ಸಾರಿಗೆ ಸಚಿವರಾಗಿದ್ದಂತಹ ಪ್ರಕಾಶ್‌ರವರು, ಕಾನೂನು ಮಂತ್ರಿಗಳು ಇವರುಗಳೆಲ್ಲರೂ ಇವರುಗಳ ಜೊತೆಯಲ್ಲಿ ಕುಳಿತು ಗಂಟೆಗಟ್ಟಲೆ ಚರ್ಚೆಯನ್ನು ಮಾಡಿದ್ದಾರೆ. ಅವರು ಹೇಳಿರತಕ್ಕಂತಹ ಕಾರ್ಮಿಕರ ಬೇಡಿಕೆಗಳು ಏನು ಇದೆ, ಅದಕ್ಕೆ ಕಾರ್ಮಿಕ ಇಲಾಖೆ ಇದೆ. ಕಾರ್ಮಿಕ ಮಂತ್ರಿಗಳಿದ್ದಾರೆ, ಉಪ ಮುಖ್ಯಮಂತ್ರಿಗಳಿದ್ದಾರೆ. ಯಾವುದೇ ನಿಜವಾಗಿಯೂ ಇರತಕ್ಕಂತಹ ಸಮಸ್ಯೆಗಳನ್ನು ಈ ಸರ್ಕಾರ ನ್ಯಾಯಯುತವಾಗಿ ಶಾಂತಿಗೆ ಭಂಗ ಬರದೇ ಇರತಕ್ಕಂತಹ ರೀತಿಯಲ್ಲಿ ಎಲ್ಲಾ ಸಂದರ್ಭದಲ್ಲಿ ಬಗೆಹರಿಸುವುದಕ್ಕೆ ತಯಾರಿದ್ದೇವೆಂದು ನಾನು ಈ ಸಂದರ್ಭದಲ್ಲಿ ಹೇಳಿವುದಕ್ಕೆ ಇಷ್ಟಪಡುತ್ತೇನೆ. ಈ ಸದನ ಸಮಿತಿಯ ವರದಿ ಏನಿದೆ ಅದರಲ್ಲಿ 23 ರೆಕಮೆಂಡೇಷನ್‌ಗಳನ್ನು ನಾವು ಮಾಡಿದ್ದೇವೆ. 23

ರೆಕಮೆಂಡೇಷನ್‌ಗಳಲ್ಲಿ ಮೊದಲನೇ ರೆಕಮೆಂಡೇಷನ್ನೇ ಇದನ್ನು ಬೈಫರ್‌ಕೇಟ್ ಮಾಡಬೇಕು ಎನ್ನತಕ್ಕಂಥದ್ದು. ಇದೇ ಕೆಲವು ಕಾರ್ಮಿಕ ಮುಖಂಡರುಗಳು ದೇಶಾದ್ಯಂತ ಹೊಗಳಿಕೊಂಡು ಬಂದರು. ಸಿಂಧ್ಯಾ ಅವರ ಅಧ್ಯಕ್ಷತೆಯಲ್ಲಿದ್ದಂಥ ಸಾರಿಗೆ ಸಂಸ್ಥೆಯ ವರದಿ ಬಹಳ ಉತ್ತಮವಾಗಿದೆ. ರಾಷ್ಟ್ರದಲ್ಲಿಯೇ ಮಾದರಿಯಾಗಿರತಕ್ಕಂಥದ್ದು. ಇದನ್ನು ಜಾರಿಗೆ ತರಬೇಕು ಎಂದು. ಆರು ತಿಂಗಳವರೆಗೂ ಹೇಳುತ್ತಿದ್ದರು. ನಾವು ಹೇಳಿರತಕ್ಕ 23 ಅಂಶಗಳನ್ನೂ ಸಹಿತ ಕಾರ್ಯಚರಣೆ ಮಾಡಲಿಕ್ಕೆ ಮಾನ್ಯ ಮೊಯಿಲಿಯವರು ಮುಖ್ಯಮಂತ್ರಿಗಳಾಗಿದ್ದಾಗ ನೀವೇ ಪ್ರಾರಂಭ ಮಾಡಿದ್ದೀರಿ. ಇನ್ನೊಂದು ರೆಕಮೆಂಡೇಷನ್ ರೀಜನಲ್ ಮ್ಯಾನೇಜರ್‌ಗಳ ಅಬಾಲಿಷ್‌ನ್ ಬಗ್ಗೆ. ಅದು ನಿಮ್ಮ ಕಾಲದಲ್ಲಿ ನೀವೇ ಮಾಡಿದ್ದೀರಿ. ಭೀಮಣ್ಣ ಖಂಡ್ರೆಯವರೇ ಮಾಡಿದ್ದು. ಅದಾದನಂತರ ಬೀಳಗಿಯವರು ಕೆಲವು ದಿನಗಳ ಕಾಲ ಸಾರಿಗೆ ಮಂತ್ರಿಯಾಗಿದ್ದರು. ಅವರು ಎರಡು ಮೂರು ನಾವು ಕೊಟ್ಟಿರತಕ್ಕ ಸಲಹೆಗಳನ್ನು ಕಾರ್ಯಗತ ಮಾಡಿದ್ದಾರೆ. ಅದರಿಂದ ಫಲಿತಾಂಶ ಸಿಕ್ಕಿದೆ. ಆದ್ದರಿಂದ ಮಾನ್ಯ ಅಧ್ಯಕ್ಷರೆ, ಬಿ.ಟಿ.ಎಸ್. ಯನ್ನಾಗಲಿ ಕೆ.ಎಸ್.ಆರ್.ಟಿ.ಸಿ. ಯನ್ನಾಗಲೀ ಖಾಸಗೀಕರಣ ಮಾಡತಕ್ಕಂಥ ಉದ್ದೇಶ ಈ ಸರ್ಕಾರಕ್ಕಿಲ್ಲ. ನಾನು ಸ್ಪಷ್ಟವಾಗಿ ಹೇಳಲಿಕ್ಕೆ ಬಯಸುತ್ತೇನೆ ಖಾಸಗೀಕರಣದ ಪ್ರಶ್ನೆಯೇ ಇಲ್ಲ. ಆದರೆ ಎಲ್ಲಿ ಪ್ರದೇಶಗಳು ರಾಷ್ಟ್ರೀಕರಣ ಆಗಿಲ್ಲ ಅಂಥ ಪ್ರದೇಶಗಳಲ್ಲಿ ವ್ಯವಸ್ಥಿತವಾಗಿ ಖಾಸಗಿ ಬಸ್ಸುಗಳು ಓಡುವ ರೀತಿಯಲ್ಲಿ ನಾವು ಮಾಡಬೇಕಾಗುತ್ತದೆ. ಮಾನ್ಯ ಜಯಚಂದ್ರ ಅವರು ಮಾನ್ಯ ಉಪನಾಯಕರು ಒಂದು ಮಾತನ್ನು ಹೇಳಿದರು. ನಿಜ ತಾವು ಹೇಳಿದ್ದು. ಅನೇಕ ಜನ ಖಾಸಗಿ ಬಸ್ಸಿನವರು ಪರ್ಮಿಟ್ ತೆಗೆದುಕೊಂಡು ಪರ್ಮಿಟ್ ಕಂಡೀಷನ್ಸ್ ಪ್ರಕಾರವಾಗಿ ಟ್ರಿಪ್‌ಗಳನ್ನು ಹಾಕತ್ತಾ ಇಲ್ಲ. ತಾವೂ ಹೇಳಿದ್ದೀರಿ. ಬೆಂಗಳೂರು ಸಿಟಿಯಲ್ಲಿ ಒಂದು ಸಾವಿರ ಖಾಸಗಿ ಬಸ್ಸುಗಳು ಕಲಾಸಿಪಾಳ್ಯಂ ಮತ್ತೆ ಬಿ.ಬಿ.ಎಸ್. ಬಸ್ ಸ್ಟ್ಯಾಂಡ್ ಸುತ್ತ ಮುತ್ತ ನಿಂತುಕೊಂಡಿರುತ್ತವೆ, ಅದಕ್ಕೆ ಪರ್ಮಿಟೆ ಇದೆಯೋ ಇಲ್ಲವೋ ಗೊತ್ತಿಲ್ಲ ಎಂದು ಹೇಳಿದ್ದೀರಿ. ಸನ್ಮಾನ್ಯ ಅಧ್ಯಕ್ಷರೆ ಸುಮಾರು 5 ವರ್ಷಗಳ ಹಿಂದೆ ಕೇಂದ್ರಸರ್ಕಾರದವರು ಮೋಟಾರ್ ವೆಹಿಕಲ್ಸ್ ಆಕ್ಟನ್ನು ಅಮೆಂಡ್ ಮಾಡಿ ನ್ಯಾಷನಲ್ ಪರ್ಮಿಟ್ಟನ್ನು ಕೊಡಲಿಕ್ಕೆ ಪ್ರಾರಂಭ ಮಾಡಿದಮೇಲೆ ನ್ಯಾಷನಲೈಸೇಷನ್ ಡೀನ್ಯಾಷನಲೈಸೇಷನ್ ಪ್ರಶ್ನೆಯೇ ಉಳಿದಿಲ್ಲ. ಪುಟ್ಟಣ್ಣಯ್ಯನವರು ಆ ಮಾತನ್ನು ಹೇಳಿದರು. ಮ್ಯಾಕ್ಸಿ ಕ್ಯಾಬ್ ಏನಿವೆ ಅವುಗಳ ಪರ್ಮಿಟ್ಟನ್ನು ನಾವು ಬ್ಯಾನ್ ಮಾಡಲಿಕ್ಕೆ ರಾಜ್ಯ ಸರ್ಕಾರಗಳಿಗೆ ಅವಕಾಶಗಳೇ ಇಲ್ಲ. ಇವತ್ತು ಎಲ್ಲಾ ರಾಜ್ಯಗಳಲ್ಲೂ ಸಹಿತ 10 ಸಾವಿರ ಕೆ.ಎಸ್.ಆರ್.ಟಿ.ಸಿ. ಬಸ್ ಇದ್ದರೆ 10 ಸಾವಿರ ಮ್ಯಾಕ್ಸಿ ಕ್ಯಾಬ್‌ಗಳಿವೆ, ಹೀಗಾಗಿ ಅದರ ಮೇಲೆ ಕಂಟ್ರೋಲ್ ಇಲ್ಲವಾಗಿದೆ. ನಾನು ಒಪ್ಪಿಕೊಳ್ಳುತ್ತೇನೆ, ಅದನ್ನು ರೆಗ್ಯುಲೇಟ್ ಮಾಡಬೇಕು. ಅದನ್ನು ನಾನು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಪ್ಯಾಸೆಂಜರುಗಳನ್ನು ಕಂಟ್ರೋಲ್ ಮಾಡಬೇಕು, ರೆಗ್ಯುಲೇಟ್ ಮಾಡಬೇಕು; ಅದನ್ನೂ ಸಹಿತ ನಾನು ಒಪ್ಪುತ್ತೇನೆ. ಮಾನ್ಯ ವಾಟಾಳ್ ನಾಗರಾಜ್ ಅವರು ಏನು ಹೇಳಿದ್ದಾರೆ ಕಾರ್ಮಿಕರ ಜೊತೆ ಸೌಹಾರ್ದಯುತವಾಗಿರತಕ್ಕ ವಿಚಾರವನ್ನು ಇಟ್ಟುಕೊಳ್ಳಬೇಕು ಎಂದು ಅದನ್ನು ಸಂಪೂರ್ಣವಾಗಿ ನಾನು ಒಪ್ಪುತ್ತೇನೆ. ಯಾವುದೇ ಒಂದು ಸಂಸ್ಥೆಯಲ್ಲಿ ಪ್ರತಿಷ್ಠೆ ಮಾಡಿಕೊಳ್ಳುವುದರಿಂದ ಉಪಯೋಗವಾಗುವುದಿಲ್ಲ. ಈ ಸರ್ಕಾರಕ್ಕೆ ಪ್ರತಿಷ್ಠೆ ಅನ್ನತಕ್ಕಂಥದ್ದೇನೂ ಇಲ್ಲ. ಜನಗಳ ಪ್ರತಿಷ್ಠೆಗೋಸ್ಕರ ಪ್ರಯಾಣಿಕರ ಹಿತದೃಷ್ಟಿಯಿಂದ ನಾವು ಕೆಲವು ಕ್ರಮಗಳನ್ನು

ತೆಗೆದುಕೊಂಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳೇ ಇವರ ಜೊತೆ ಕುಳಿತು ಮಾತನಾಡಿದ್ದಾರೆ. ಸಾಂದರ್ಭಿಕವಾಗಿ ಈ ಒಂದು ತಿದ್ದುಪಡಿಗೆ ಅದು ಸಂಬಂಧ ಇಲ್ಲದೇ ಹೋದರೂ ಸಹ ಗೌರವಾನ್ವಿತ ಸದಸ್ಯರುಗಳು ಈ ಒಂದು ಪ್ರಶ್ನೆಯನ್ನು ಎತ್ತಿರುವುದರಿಂದಾಗಿ ನಾನು ದೀರ್ಘವಾಗಿ ಉತ್ತರವನ್ನು ಕೊಟ್ಟಿದ್ದೇನೆ. ಮಾನ್ಯ ಉಪಮುಖ್ಯಮಂತ್ರಿಗಳಿಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅವರಿಗೆ ನಮ್ಮ ಕಾರ್ಮಿಕ ಇಲಾಖೆಯೂ ಸಹಿತ ಇದೆ. ಮಾನ್ಯ ಕಾರ್ಮಿಕ ಇಲಾಖೆ ಮಂತ್ರಿಗಳೂ ಸಹಿತ ಇದ್ದಾರೆ. ಕಾರ್ಮಿಕರಿಗೆ ಸಂಬಂಧಪಟ್ಟ ನ್ಯಾಯಯುತವಾದ ಬೇಡಿಕೆಗಳೇನಿವೆ ಅದನ್ನೆಲ್ಲಾ ಬಗೆಹರಿಸುತ್ತೇವೆ. ದಯಮಾಡಿ ಈ ಸದನದ ಎಲ್ಲಾ ಸದಸ್ಯರುಗಳೂ ಸಹಿತ ಈ ತಿದ್ದುಪಡಿಗೆ ಒಪ್ಪಿಗೆ ಕೊಡಬೇಕು ಎಂದು ನಾನು ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಸಿಂಧ್ಯಾ ರವರೇ, ಬಸ್ ದರ ಏರಿಸುತ್ತೇವೆ ಎಂದು ಹೇಳಿದ್ದೀರಿ ನೀವು. ಏನು ಕಾರಣ ಸ್ವಲ್ಪ ಹೇಳಿ ದಯವಿಟ್ಟು ಈ ಸದನದಲ್ಲಿ.

ಶ್ರೀ ಪಿ.ಜಿ.ಆರ್.ಸಿಂಧ್ಯಾ:- ಮಾನ್ಯ ಅಧ್ಯಕ್ಷರೆ, ಬಸ್ ದರಕ್ಕೂ ಈ ತಿದ್ದುಪಡಿಗೂ ನೇರವಾದ ಸಂಬಂಧ ಇಲ್ಲ. ನಾನು ಒಪ್ಪಿಕೊಳ್ಳುತ್ತೇನೆ. 27ನೇ ತಾರೀಖಿನವರೆಗೂ ಸದನ ಸೇರಬೇಕೆಂದು ಮಾನ್ಯ ಅಧ್ಯಕ್ಷರು ತೀರ್ಮಾನ ಮಾಡಿರುವುದರಿಂದ ಇನ್ನೊಂದು ಸಾರಿ ಇದರ ಬಗ್ಗೆ ಚರ್ಚೆ ಮಾಡೋಣ.

ಉಪಾಧ್ಯಕ್ಷರು:- ಮತ್ತೊಮ್ಮೆ ಮಾತನಾಡಿ. ಅವಕಾಶ ಇದೆ.

ಶ್ರೀ ವಾಟಾಳ್ ನಾಗರಾಜ್:- ವಿಧಾನಪರಿಷತ್ತಿನಲ್ಲಿ ಹೇಳಿಬಿಟ್ಟಿದ್ದಾರೆ ಸ್ವಾಮಿ ಬಸ್ ದರ ಜಾಸ್ತಿ ಮಾಡುತ್ತೇವೆ ಎಂದು. ಅದನ್ನು ಈ ಸದನದಲ್ಲಿ ಹೇಳುವುದಕ್ಕೇನು?

ಉಪಾಧ್ಯಕ್ಷರು:- ಇನ್ನೂ ಒಂದು ವಾರ ಸದನ ಸೇರುತ್ತದಲ್ಲಾ ಆಗ ಚರ್ಚೆ ಮಾಡಿ. ಈಗ ಏತಕ್ಕೆ ಅದು?

ಶ್ರೀ ವಾಟಾಳ್ ನಾಗರಾಜ್:- ಸಾರ್, ಆ ಸದನದಲ್ಲಿ ಉತ್ತರ ಕೊಟ್ಟಿದ್ದಾರೆ. ಇಲ್ಲಿ ಏತಕ್ಕೆ ಕೊಡಬಾರದು ಎಂದು ಕೇಳುತ್ತಿದ್ದೇನೆ. ಆ ಸದನದಲ್ಲಿ ಸ್ಪಷ್ಟವಾಗಿ ಉತ್ತರ ಕೊಟ್ಟಿದ್ದಾರೆ ಇವರು. ಬಸ್ ದರವನ್ನು ಏರಿಸುತ್ತೇವೆ ಎಂದು ಹೇಳಿ.

ಉಪಾಧ್ಯಕ್ಷರು:- ಈಗ ವಿರೋಧಪಕ್ಷದ ನಾಯಕರು ಎಲ್ಲರೂ ಕೂಡಿ ಮಾತನಾಡಿ ಕೆ.ಇ.ಬಿ. ಮತ್ತು ಕೆ.ಎಸ್.ಆರ್.ಟಿ.ಸಿ. ಬಗ್ಗೆ ಒಂದು ದಿವಸ, ಎರಡು ದಿವಸ ಚರ್ಚೆ ಮಾಡೋಣ ಎಂದು ಮೊನ್ನೆ ದಿವಸ ತೀರ್ಮಾನ ಆಗಿದೆ. ಆ ಪ್ರಕಾರ ನೀವು ಚರ್ಚೆ ಮಾಡಿರಿ. ಈಗ ಏಕೆ ಅದು? ಎರಡು ದಿವಸ ಅಥವಾ ಒಂದು ದಿವಸ ಅವಕಾಶ ಇದೆ ಎಂದು ಮಾತನಾಡಿದ್ದಾರೆ. ಅದನ್ನು ನೀವು ಉಪಯೋಗ ಮಾಡಿಕೊಳ್ಳಿರಿ. ದಯಮಾಡಿ ಉಪಯೋಗ ಮಾಡಿಕೊಳ್ಳಿರಿ ತಾವು.

ಪರ್ಯಾಲೋಚನಾ ಪ್ರಸ್ತಾವ

ಉಪಾಧ್ಯಕ್ಷರು:- ಪ್ರಸ್ತಾವ ಏನೆಂದರೆ:

"1997ನೇ ಸಾಲಿನ ಕರ್ನಾಟಕ ಕರಾರು ವಾಹನಗಳ (ಅರ್ಜನೆ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2ರಿಂದ 3ರವರೆಗೆ

ಉಪಾಧ್ಯಕ್ಷರು:- " ಖಂಡ 2ರಿಂದ 3ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ 3ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಉಪಾಧ್ಯಕ್ಷರು:- ಪ್ರಸ್ತಾವ ಏನೆಂದರೆ:-

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಲ್ಪಟ್ಟಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಪಿ.ಜಿ.ಆರ್. ಸಿಂಧ್ಯಾ:- (ಸಾರಿಗೆ ಮಂತ್ರಿಗಳು)

ಮಾನ್ಯ ಅಧ್ಯಕ್ಷರೆ, 1997ರ ಕರ್ನಾಟಕ ಕರಾರುವಾಹನಗಳ (ಅರ್ಜನೆ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ವಿನಂತಿಸುತ್ತೇನೆ.

ಉಪಾಧ್ಯಕ್ಷರು:- ಪ್ರಸ್ತಾವ ಏನೆಂದರೆ:

"1997ರ ಕರ್ನಾಟಕ ಕರಾರು ವಾಹನಗಳ (ಅರ್ಜಿನೆ) (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಕೆ ನೀಡಲಾಯಿತು.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಸನ್ಮಾನ್ಯ ಉಪಾಧ್ಯಕ್ಷರೆ, ನಾನು ಮುಂಜಾನೆ ಒಂದು ನಿಲುವಳಿ ಸೂಚನೆ ಬಗೆ ಪ್ರಸ್ತಾಪ ಮಾಡಿದ್ದೆ. ಅದು ನಿಲುವಳಿ ಸೂಚನೆಯಾಗಿ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ, ರೂಲ್ 60 ಕೆಳಗೆ ಬರುವುದಿಲ್ಲ, ತಾವು ಚರ್ಚೆ ಮಾಡಬಹುದು, ಆದರೆ 3 ಗಂಟೆಗೆ ಮಾಡಬಹುದು ಅನ್ನತಕ್ಕಂಥ ಮಾತನ್ನು ಹೇಳಿದಮೇಲೆ ಬಿಸಿಸೆಸ್ ಅಡ್ವೈಸರಿ ಕಮಿಟಿ ಸೇರಿದಾಗ ಎರಡು ಸಣ್ಣತಿದ್ದುಪಡಿ ಇವೆ, ಅವು ಮುಗಿದ ಮೇಲೆ ನಾವು ತೆಗೆದುಕೊಳ್ಳಬಹುದು. ಏಕೆಂದರೆ ಇನ್ನೂ ಒಂದು ವಾರ ಸದನ ಸೇರುವುದರಿಂದ ಅದಕ್ಕೆ ಸಾಕಷ್ಟು ಅವಕಾಶ ಇದೆ. ಆದ್ದರಿಂತ ತಕ್ಷಣ ಆ ಬಿಲ್ ಅದಮೇಲೆ ತೆಗೆದುಕೊಳ್ಳಿ ಎಂದು ಹೇಳಿದ ಮೇಲೆ ನಾವು ಒಪ್ಪಿಕೊಂಡೆವು. ನಾನು ಕೊಟ್ಟಂಥ ಸೂಚನೆ ಏನೆಂದರೆ ಈ ಆಶ್ರಯ ಯೋಜನೆ ಕೆಳಗೆ ಬಡವರಿಗೆ ಕೊಡತಕ್ಕಂಥ ಮನೆಗಳು ಮತ್ತು ಸೈಟುಗಳೇನಿವೆ..

ಉಪಾಧ್ಯಕ್ಷರು:– ಒಂದು ನಿಮಿಷ ಇರಿ. ಒಂದು ಪ್ರಕಟಣೆ ಇದೆ.

6. ಪ್ರಕಟಣೆ

ಉಪಾಧ್ಯಕ್ಷರು:- ದಿನಾಂಕ 20-2-1997ರಂದು ಕಾರ್ಯಕಲಾಪಗಳ ಸಲಹಾ ಸಮಿತಿಯು ಸಭೆ ಸೇರಿ ದಿನಾಂಕ 24ನೇ ಫೆಬ್ರವರಿ 1997ರಿಂದ ದಿನಾಂಕ 27ನೇ ಫೆಬ್ರವರಿ, 1997ರವರೆಗೆ ಅಧಿವೇಶನವನ್ನು ಮುಂದುವರೆಸಲು ತೀರ್ಮಾನಿಸಿರುತ್ತಾರೆ. ಮುಂದುವರೆದ ಅಧಿವೇಶನದಲ್ಲಿ ಈ ಕೆಳಕಂಡಂತೆ ಕಾರ್ಯಕಲಾಪಗಳನ್ನು ನಡೆಸಲಾಗುವುದು.

24-2-1997 ಸೋಮವಾರದಿಂದ	1. ಗಮನ ಸೆಳೆಯುವ ಸೂಚನೆಗಳು
26-2-1997 ಬುಧವಾರದವರೆಗೆ	2. ಶಾಸನ ರಚನೆ- ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.
	3. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಚರ್ಚೆ
27-2-1997 ಗುರುವಾರ	ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲಿನ ಚರ್ಚೆಗೆ ಉತ್ತರ.

ಸದನವು ಈ ಮೇಲ್ಕಂಡ ಶಿಫಾರಸ್ಸುಗಳಿಗೆ ಒಪ್ಪಿಗೆ ನೀಡುತ್ತದೆಂದು ಭಾವಿಸುತ್ತೇನೆ.